2

# ಬೈಬಲಿನ ಪ್ರವಾದನೆಗಳು

ಬೈಬಲಿನ ಅರ್ಥದಲ್ಲಿ ಪ್ರವಾದನೆಯು ದೇವರಿಂದ ಬಂದ ಸಂದೇಶವಾಗಿದೆ. ಅದು ಭೂತಕಾಲಕ್ಕೆ, ವರ್ತಮಾನ ಕಾಲಕ್ಕೆ ಇಲ್ಲವೇ ಭವಿಷತ್ ಕಾಲಕ್ಕೆ ಸಂಬಂಧಿಸಿದ್ದಿರಬಹುದು. ಮನುಷ್ಯರ ಮನಸ್ಸುಗಳು ಭೂತಕಾಲವನ್ನು ಮತ್ತು ವರ್ತನಕಾಲವನ್ನು ಸಮೀಕ್ಷೆ ಮಾಡಲು ಶಕ್ತವಾದುದರಿಂದ, ಆದರೆ ಭವಿಷ್ಯವನ್ನು ಮುಂತಿಳಿಸಲು ಶಕ್ತವಾಗದೇ ಇರುವದರಿಂದ ಬರಲಿಕ್ಕಿದ್ದ ಘಟನೆಗಳನ್ನು ನಿಖರವಾಗಿ ಮುಂತಿಳಿಸುವಿಕೆಯು ಮಾನವಾತೀತವಾದುದ್ದಾಗಿರ ಬೇಕು. ಆದುದರಿಂದ ಬೈಬಲಿನ ಪ್ರವಾದನೆಗಳು ದೈವತ್ವದ ಪ್ರದರ್ಶನಗಳಾಗಿವೆ. ಜ್ಞಾನದ ಅದ್ಭುತ - ಕಾರ್ಯವು ಬಲದ ಅದ್ಭುತ ಕಾರ್ಯದಂತೆ ಪ್ರಕೃತಿಗೆ ಅತೀತವಾದದ್ದಾಗಿರುವುದು. ಬೈಬಲು ನಿಜವಾಗಿಯೂ ಯಾವುದೇ ರೀತಿಯಿಂದ ಮನುಷ್ಯರಿಗೆ ತಿಳಿಯದೇ ಇರುವ ಭವಿಷ್ಯದ ಘಟನೆಗಳನ್ನು ಮುಂತಿಳಿಸಿದ್ದರೆ, ಆಗ ಆ ಮುಂತಿಳಿಸುವಿಕೆಯು ಬೈಬಲಿನ ಕರ್ತೃವು ಮನುಷ್ಯನಲ್ಲ ಆದರೆ ದೇವರು ಎಂಬುದಕ್ಕೆ ರುಜುವಾತಾಗಿರುವುದು.

ಬಹಳ ವಿಧವಾದ ಪ್ರವಾದನೆಗಳು ಬೈಬಲಿನಲ್ಲಿ ಕಂಡು ಬರುವವು. ಅನೇಕ ಮುಂತಿಳಿಸುವಿಕೆಗಳು ಕೆಲವೊಂದು ಪಟ್ಟಣಗಳನ್ನು, ರಾಷ್ಟ್ರಗಳನ್ನು ಮತ್ತು ಜನಾಂಗಗಳನ್ನು ಕುರಿತಾಗಿ ದೇವರ ರಾಜ್ಯವನ್ನು ಹಾಗೂ ಯೇಸುವನ್ನು ಒಳಗೊಂಡ ವ್ಯಕ್ತಿಗಳನ್ನು ಕುರಿತು ಹೇಳಲ್ಪಟ್ಟಿವೆ. (ಹಿಂದಿನ ಪಾಠದಲ್ಲಿ ಯೇಸುವಿನ ಬಗ್ಗೆ ಹಲವಾರು ಪ್ರವಾದನೆಗಳನ್ನು ಹೇಳಲಾಗಿದೆ. ಇವು ಈ ಅಧ್ಯಯನಗಳಲ್ಲಿ ವಿಸ್ತರಿಸಲ್ಪಡುವವು.)

## ಪಟ್ಟಣಗಳನ್ನು ಕುರಿತು ಪ್ರವಾದನೆಗಳ

**ಯೆರಿಕೋ**

ಯೆಹೋಶುವನ ಕೈಕೆಳಗೆ ಯೆರಿಕೋ ನಾಶವಾದ ನಂತರ, ಪಟ್ಟಣವು ಪುನಃ ಕಟ್ಟಲ್ಪಡುವಾಗ ಅದಕ್ಕೆ ಜವಾಬ್ದಾರನಾಗುವ ಮನುಷ್ಯನು ತನ್ನ ಹಿರೀಮಗನನ್ನೂ ಕಿರೀಮಗನನ್ನೂ ಕಳೆದು ಕೊಳ್ಳುವನು ಎಂಬ ಅಸಾಧಾರಣವಾದ ಮುಂತಿಳಿಸುವಿಕೆಯು ಕೊಡಲ್ಪಟ್ಟಿತು (ಯೆಹೋಶುವ 6:26). ಸುಮಾರು ಐದುನೂರು ವರ್ಷಗಳ ನಂತರ ಹಿಯೇಲನಲ್ಲಿ ಈ ಭವಿಷ್ಯವು ಸ್ಪಷ್ಟವಾಗಿ ನೆರವೇರಿತು. ಯೆರಿಕೋವನ್ನು ಪುನಃ ಕಟ್ಟುತ್ತಿರುವಾಗ ಈ ಬೇತೇಲಿನವನು ಹಿರೀಮಗನಾದ ಅಬಿರಾಮನನ್ನು ಮತ್ತು ಕಿರೀಮಗನಾದ ಸೆಗೂಬನನ್ನು ಕಳೆದು ಕೊಂಡನು (1 ಅರಸು 16:34).

**ತೂರು**

"ಫೊಯಿನೀಕ್ಯದ ಬಹಳ ಪ್ರಸಿದ್ಧವಾದ ಪಟ್ಟಣವಾದ ಮತ್ತು ಜಗತ್ತಿನ ಪುರಾತನ ವಾಣಿಜ್ಯ ಕೇಂದ್ರವಾದ" ತೂರಿನ ಬಗ್ಗೆ ದೇವರ ಐದು ಜನ ಪ್ರವಾದಿಗಳಿಗೆ ದೈವಿಕ ಸಂದೇಶವು ಕೊಡಲ್ಪಟ್ಟಿತು. ಅದು ಅನೇಕ ರಾಷ್ಟ್ರಗಳಿಂದ ದಾಳಿಗೆ ಒಳಪಡಲ್ಪಡಬೇಕಾಗಿತ್ತು (ಯೆಹೆಜ್ಕೇಲ 26:3). ಇದು ಬಬಿಲೋನ್ಯರಿಂದ, ಗ್ರೀಕರಿಂದ, ರೋಮಾನ್‌ರಿಂದ ಹಾಗೂ ಟರ್ಕ್‌ರಿಂದ ದಾಳಿ ಮಾಡಲ್ಪಟ್ಟಾಗ ಈ ಪ್ರವಾದನೆ ನೆರವೇರಿತು. ಎಪ್ಪತ್ತು ವರ್ಷಗಳವರೆಗೆ ತೂರ ಮರೆಯಲ್ಪಡ ಬೇಕಾಗಿತ್ತು (ಯೆಶಾಯ 23:15). ಬಬಿಲೋನ ದಾಳಿಯ ಅಂತ್ಯದ ಹಾಗೂ ತೂರ ಮೊದಲನೆಯ ಸಲ ಸೋಲಿಸಲ್ಪಟ್ಟಾಗಿನ 125 ವರ್ಷಗಳ ಮೊದಲು ಈ ಮುಂತಿಳಿಸುವಿಕೆಯು ಹೇಳಲ್ಪಟ್ಟಿತು. ಸುಮಾರು ಎಪ್ಪತ್ತೈದು ವರ್ಷಗಳವರೆಗೆ ಮರೆತು ಬಿಟ್ಟ ತರುವಾಯ ಇನ್ನೊಂದು ಪ್ರಾಮುಖ್ಯವಾದ ಮುಂತಿಳಿಸುವಿಕೆಗನುಗುಣವಾಗಿ ತೂರ ಸಮುದ್ರದ ಮಧ್ಯದಲ್ಲಿ ಬಲಗೊಳ್ಳುವುದು (ಯೆಹೆಜ್ಕೇಲ 26:17). ಎಪ್ಪತ್ತು ವರ್ಷಗಳ ಹಾಳಾಗುವಿಕೆಯ ನಂತರ ಹಿಂದಿರುಗಿ ಬಂದವರು ಹಳೇ ಸ್ಥಳದ ಮೇಲೆ ಕಟ್ಟುವದರ ಬದಲು ಸಮುದ್ರ ದಡದಿಂದ ಅರ್ಧ ಮೈಲು ದೂರದಲ್ಲಿದ್ದ ನಡುಗಡ್ಡೆಗೆ ಹೋದರು.

ಬರಿದಾದ ಬಂಡೆಯನ್ನು ಬಹಿರಂಗಪಡಿಸಿ, ಕಲ್ಲುಗಳು, ಕಟ್ಟಿಗೆ ಮತ್ತು ತೂರಿನ ಕಟ್ಟಡಗಳು ಮುರಿದು ಬಿದ್ದ ರಾಶಿಯು ಸಮುದ್ರದೊಳಗೆ ಎಸೆದು ಬಿಡಲ್ಪಡುವವು ಎಂದು ಯೆಹೆಜ್ಕೇಲನು ಮುಂತಿಳಿಸಿದನು (ಯೆಹೆಜ್ಕೇಲ 26:12-14). ದೊಡ್ಡ ಅಲೆಕ್ಸಾಂಡರನು ಹಳೇ ಪಟ್ಟಣದಿಂದ ಹೊಸ ನಡುಗಡ್ಡೆ ಪಟ್ಟಣಕ್ಕೆ ಸಂಪರ್ಕ ಮಾರ್ಗವನ್ನು ಕಟ್ಟಲು ಒಯ್ಯಬಹುದಾದ ಪ್ರತಿಯೊಂದನ್ನು ಉಪಯೋಗಿಸಿದಾಗ ಇದು ವಿಶೇಷವಾಗಿ ನೆರವೇರಿತು. ಮೀನು ಬಲೆಗಳನ್ನು ಒಣಗಿಸಲು ಹಾಕುವದಕ್ಕಾಗಿ ಹಳೇ ಪಟ್ಟಣವು ಸ್ಥಳವಾಗುವದೆಂದು ಪ್ರವಾದಿಯು ಮುಂತಿಳಿಸಿದನು (ಯೆಹೆಜ್ಕೇಲ 26:5, 14). ಹಳೇ ಪಟ್ಟಣದ ಬಂಡೆಗಳ ಮೇಲೆ ಬೆಸ್ತರು ಬಲೆಗಳನ್ನು ಒಣಗಿಸಲು ಹಾಕಿದ್ದನ್ನು ಯಾತ್ರಿಕರು ಕಂಡುಕೊಂಡಿದ್ದಾರೆ. ಹೊಸ ಪಟ್ಟಣವು ಬೆಂಕಿಯಿಂದ ಸುಡಲ್ಪಡುವದನ್ನು ಪ್ರವಾದಿಯು ಮುಂತಿಳಿಸಿದನು (ಆಮೋಸ 1:10; ಜೆಕರ್ಯ 9:3, 4). ಮಹಾ ಅಲೆಕ್ಸಾಂಡರನು ಬಹಳ ಸಮಯದ ವರೆಗೆ ತನ್ನ ದಾಳಿಯನ್ನು ಎದುರಿಸಿದ್ದಕ್ಕಾಗಿ ರೋಷಗೊಂಡು, ಅಂತಿಮವಾಗಿ ಪಟ್ಟಣವನ್ನು ಹಾಳುಗೆಡವಿ ಸುಟ್ಟು ಹಾಕಿದನು.

ಅನಂತರದ ಸಮಯಗಳಲ್ಲಿ ತೂರಿನವರು ಮೂರ್ತಿಪೂಜೆಯನ್ನು ಬಿಟ್ಟು ನಿಜವಾದ ದೇವರನ್ನು ಸ್ವೀಕರಿಸಿದರು. ಫೊಯಿನೀಕ್ಯದ ಒಬ್ಬ ಮಹಿಳೆಯ ದೊಡ್ಡ ವಿಶ್ವಾಸಕ್ಕಾಗಿ ಅಕೆಯನ್ನು ಯೇಸು ಹೊಗಳಿದನು (ಮತ್ತಾಯ 15:21-28), ಪೌಲನು ಯೆರೂಸಲೇಮಿಗೆ ತನ್ನ ಕೊನೆಯ ಪ್ರಯಾಣದಲ್ಲಿ ಅಲ್ಲಿ ಕರ್ತನ ಸಭೆಯನ್ನು ಕಂಡುಕೊಂಡನು (ಅಪೊಸ್ತಲರ ಕೃತ್ಯ 21:3-5) ಡಿಯೋಕ್ಲೆಸಿಯನ್ ಹಿಂಸಾಕಾಲದಲ್ಲಿ ತೂರ "ಅನೇಕ ವಿಶ್ವಾಸಿಗಳನ್ನು, ಹತಸಾಕ್ಷಿಗಳನ್ನು ಪ್ರಸಿದ್ಧಿಪಡಿಸಿತು."

**ಬಬಿಲೋನ**

ಅನೇಕ ವರ್ಷಗಳವರೆಗೆ (ಸುಮಾರು ಕ್ರಿ. ಪೂ. 854-612) ತನ್ನ ರಾಜಧಾನಿಯಾಗಿ ನಿನೆವೆಯೊಂದಿಗೆ ಅಶ್ಶೂರ್ಯವು ಜಗತ್ತಿನ ಪ್ರಬಲವಾದ ಶಕ್ತಿಯಾಗಿತ್ತು, ಬಬಿಲೋನ ರಾಜಧಾನಿಯಾಗಿದ್ದ ಬಬಿಲೋನ ಇಲ್ಲವೇ ಖಲ್ದೀಯದ' (ಸುಮಾರು ಕ್ರಿ. ಪೂ. 605-538) ಪತನದ ಬಗ್ಗೆ ಪಲೆಸ್ತೀನದಲ್ಲಿ ಇಬ್ಬರು ಪ್ರವಾದಿಗಳು ಮಾತಾಡಿದರು. ಅಶ್ಶೂರ್ಯದ ಪತನವನ್ನು ಇನ್ನೂ ಮಾನವ ಅಂತರ್ ದೃಷ್ಟಿಯು ಮುನ್ನೋಡದಿರುವಾಗ ಪ್ರೇರೇಪಣೆ ಹೊಂದಿದ ಪ್ರವಾದಿ ಯೆಶಾಯನು ಜಗತ್ತಿನ ಇನ್ನೊಂದು ಶಕ್ತಿಯಾದ ಬಬಿಲೋನಿನ ಏಳುವಿಕೆಯನ್ನಷ್ಟೇ

ಅಲ್ಲ ಅದರ ನಾಶನವನ್ನು ಧೈರ್ಯದಿಂದ ಪ್ರಕಟಿಸಿದನು (ಯೆಶಾಯ 13:19; 21:9). ಆ ಸಾಮ್ರಾಜ್ಯದ ಪತನದ ಅವನ ಮುಂತಿಳಿಸುವಿಕೆಯು ಅದರ ಸಂಭವಿಸುವಿಕೆಯ ಎರಡು ಶತಮಾನಗಳ ಮೊದಲು ಹೇಳಲ್ಪಟ್ಟಿತು. ಆಮೇಲೆ ಬಬಿಲೋನಿನ ಉದಯದ ನಂತರ ಘಟನೆಯು ಸಂಭವಿಸುವದಕ್ಕಿಂತ ಐವತ್ತಾರು ವರ್ಷಗಳ ಮೊದಲು ನಾಶನದ ಸಂದೇಶದೊಂದಿಗೆ ದೇವರು ಆ ರಾಷ್ಟ್ರಕ್ಕೆ ಇನ್ನೊಬ್ಬ ಪ್ರವಾದಿಯನ್ನು ಕಳುಹಿಸಿದನು (ಯೆರೆಮೀಯ 25:12; 27:8; 50:10; 51:24; ಹಬಕ್ಕೂಕ 2 ಸಹ ನೋಡಿರಿ).

ರಾಜಧಾನಿಯು ಅಭೇದ್ಯವಾದದ್ದು ಕಂಡು ಬಂದರೆ ಅದು ಬಬಿಲೋನ ಆಗಿತ್ತು. ಉನ್ನತವಾದ, ಹಿತ್ತಾಳೆ ದ್ವಾರಗಳೊಂದಿಗೆ ದಪ್ಪವಾದ ಗೋಡೆಗಳು ದಾಳಿ ಮಾಡುವವರನ್ನು ತಡೆದವು. ಆದಾಗ್ಯೂ ಯೂದಾಯದಲ್ಲಿಯ ದೇವರ ಪ್ರವಾದಿಗಳು ಮಹಾಪಟ್ಟಣವು ಬೀಳುವುದೆಂದು ಸಾರಲು ಧೈರ್ಯಗೊಂಡರು.

ಬಬಿಲೋನಿನ ಬಗ್ಗೆ ವಿಶಿಷ್ಟವಾದ ವಿವರಣೆಗಳು ಸಾರಲ್ಪಟ್ಟವು. ಮೇದ್ಯರು, ಎಲಾಮ್ಯರು (ಫರ್ಷಿಯನ್ನರು) ಯಶಸ್ವಿಯಾದ ದಾಳಿಗಾರರಾಗಿರಬೇಕಾಗಿತ್ತು. ಹಾಗೂ ಅವರ ಹೆಸರುಗಳು ಹೇಳಲ್ಪಟ್ಟಿವೆ (ದಾನಿಯೇಲ 5:28). ಅವರ ಅರಸ, ಕೋರೇಷನು ಸಹ ಹೆಸರು ಹೇಳಿ ನಮೋದಿಸಲ್ಪಟ್ಟಿದ್ದಾನೆ (ಯೆಶಾಯ 44:28). ಅವನು ಜಯಿಸಲಿಕ್ಕಿದ್ದ ವಿವಿಧ ರಾಷ್ಟ್ರಗಳಲ್ಲಿ ಕೆಲವು ದಾಳಿಮಾಡುವ ಅವನ ಸೈನ್ಯದ ಭಾಗವಾಗಿರಬೇಕಾಗಿತ್ತು (ಯೆರೆಮೀಯ 50:27-32). ಹೊಳೆಯು ಒಣಗಿಸಲ್ಪಡುವುದು (ಯೆಶಾಯ 44:27; ಯೆರೆಮೀಯ 51:36). ಕ್ರಿ.ಪೂ. 538ರಲ್ಲಿ ಕೋರೇಷನು ಯುಫ್ರೆಟಿಸ್ ನದಿಯ ಹರಿಯುವಿಕೆಯ ಮಾರ್ಗವನ್ನು ಬದಲಾಯಿಸಿ ಆ ನೆಲದ ಮುಖಾಂತರ ಪಟ್ಟಣದೊಳಗೆ ಪ್ರವೇಶಿಸಿದಾಗ ಇದು ನೆರವೇರಿತು. ಬಬಿಲೋನಿನಲ್ಲಿಯ ವಿಲಾಸೀ ಭೋಗ ಮತ್ತು ಕುಡುಕತನವು ಮುಂತಿಳಿಸಲ್ಪಟ್ಟಿತು (ಯೆರೆಮೀಯ 51:39, 58). ಕೆಲವು ದ್ವಾರಗಳು ತೆರೆದಿಡಲ್ಪಡ ಬೇಕಾಗಿತ್ತು (ಯೆಶಾಯ 45:1). ಒಂದು ಹಬ್ಬದ ಆಚರಣೆಯ ಸಮಯದಲ್ಲಿ ಪಟ್ಟಣದೊಳಗಿದ್ದ ನದಿಯ ಎರಡೂ ಪಕ್ಕಗಳಲ್ಲಿದ್ದ ದ್ವಾರಗಳು ಅಜಾಗರೂಕತೆಯಿಂದ ತೆರೆದಿಡಲ್ಪಟ್ಟಾಗ ಈ ಮುಂತಿಳಿಸುವಿಕೆಗಳು ನೆರವೇರಿದವು ಮತ್ತು ಕೋರೇಷನ ಸೈನಿಕರು ಅರಮನೆಯ ಕಾವಲುಗಾರರಿಗೆ ಆಶ್ಚರ್ಯವನ್ನುಂಟು ಮಾಡಿದರು. ಮಹಾ ಐಶ್ವರ್ಯಗಳು ತೆಗೆದು ಕೊಂಡು ಹೋಗಲ್ಪಡುವವೆಂದು ಪ್ರವಾದಿ ಹೇಳಿದನು (ಯೆಶಾಯ 45:3), ಹಾಗೂ ಅದು ಹಾಗೆಯೇ ಸಂಭವಿಸಿತು.

ಸಂಪೂರ್ಣ ನಾಶನವು ಬಬಿಲೋನಿನ ಗತಿಯಾಗಿತ್ತು (ಯೆಶಾಯ 47:11). ನೆರವೇರಿಸುವಿಕೆಯು ಕ್ರಮೇಣವಾಗಿತ್ತು. ಕೊರೇಷನು ಪಟ್ಟಣ ನಾಶಮಾಡಿದ ನಂತರ ಅದು ಫರ್ಷಿಯದ ದಾರ್ಯಾವೇಷನಿಂದ ಪುನಃ ವಶಪಡಿಸಿಕೊಳ್ಳಲ್ಪಟ್ಟಿತು. ಆಮೇಲೆ ದೊಡ್ಡ ಅಲೇಕ್ಸಾಂಡರನಿಂದ ವಶಪಡಿಸಿಕೊಳ್ಳಲ್ಪಟ್ಟಿತು. ಕ್ರಿ.ಶ. ಎರಡನೆಯ ಶತಮಾನಕ್ಕೆ, ಗೋಡೆಗಳನ್ನು ಬಿಟ್ಟು ಬೇರೆ ಯಾವುದೂ ಉಳಿಯಲಿಲ್ಲ. ಸಾರಾಸಿನರ ಸಮಯದೊಳಗಾಗಿ ರಾಶಿಯಾಗಿ ಕೂಡುತ್ತಿದ್ದ ಮರು ಭೂಮಿಯ ಉಸುಕು ಒಮ್ಮೆ ಎತ್ತರದ ಗೋಡೆಗಳನ್ನು ಮುಚ್ಚಿಬಿಟ್ಟಿತು. ನಾಶನವು ಸಂಪೂರ್ಣವಾಯಿತು. ಜವುಗು ನೆಲವನ್ನು (ಯೆಶಾಯ 14:23) ಹಾಗೂ ಕಗ್ಗಾಡು ಬೆಗ್ಗಾಡವನ್ನು (ಯೆರೆಮೀಯ 51:43) ಕುರಿತು ಪ್ರವಾದಿಗಳು ಮಾತಾಡಿದರು. ಎರಡು ಪ್ರವಾದನೆಗಳೂ ನೆರವೇರಿದವು; ಬಬಿಲೋನಿನ ಒಣ ಮರುಭೂಮಿಯಲ್ಲಿ ಯಾವಾಗಲಾದರೊಮ್ಮೆ ನಿಂತ ನೀರುಗಳ ಕೊಳ ಗಳು ಕಂಡು ಬರುತ್ತವೆ.

ಬಲಶಾಲೀ ಬಬಿಲೋನು ಮೇಲಕ್ಕೆ ಏಳುವುದು. ರಾಜ್ಯಗಳ ಮಹಿಮೆಯೂ ಖಲ್ದೀಯರ ಗರ್ವದ ಸೌಂದರ್ಯವೂ ಆಗುವದೆಂದು ಪ್ರವಾದಿಸಲ್ಪಟ್ಟಿತು (ಯೆಶಾಯ 13:19). ಆಮೇಲೆ

ಅದು ಭಯತುಂಬಿದ ಕುರುಬರು ಆ ಪ್ರದೇಶದಲ್ಲಿ ರಾತ್ರಿಯನ್ನು ಕಳೆಯದಷ್ಟು ಹಾಳಾಗಿ ಹೋಗುವುದು (ಯೆಶಾಯ 13:20). ಕಾಡು ಮೃಗಗಳು ಮತ್ತು ಗೂಬೆಗಳಂಥ ಪಕ್ಷಿಗಳು ಅದರ ನಿವಾಸಿಗಳಾಗುವವು (ಯೆಶಾಯ 13:21, 22). ಅದರ ವಿಲಾಸದ ಅರಮನೆಯು ನರಿಗಳ ಪಾಲಾಗುವುದು ಹಾಗೂ ಅದರ ಮಂದಿರಗಳು ಕ್ರಿಮಿಕೀಟಕಗಳಿಂದ ತುಂಬಿರುವವು (ಯೆಶಾಯ 13:22). ಅದರಲ್ಲಿಯ ಬೇಲನ ಮಹಾ ದೇವಾಲಯವು ಸುತ್ತಳತೆಯಲ್ಲಿ ಅರ್ಧ ಮೈಲು ಮತ್ತು ಎತ್ತರದಲ್ಲಿ 600 ಅಡಿಯಾದದ್ದು, ಹಾಳು ಬೀಳುವುದು (ನೋಡಿರಿ ಯೆರೆಮೀಯ 51:37) ಪ್ರವಾದಿಯು ಮುಂತಿಳಿಸಿದಂತೆ ಆ ಪ್ರದೇಶಕ್ಕೆ ಬರುವ ಯಾತ್ರಿಕರು ಆಶ್ಚರ್ಯದಿಂದ ತುಂಬಿಸಲ್ಪಡುವರು (ಯೆರೆಮೀಯ 51:43).

ಭಾರತಕ್ಕೆ ಹೊಸ ಮಾರ್ಗವನ್ನು ಒದಗಿಸುತ್ತ, ಕೇಪ್ ಆಫ್ ಗುಡ್ ಹೋಪದ ಸಂಶೋಧನೆಯ ನಿಮಿತ್ತವಾಗಿ ಬಹುಶಃ ಭಾಗಶಃವಾಗಿ ಬಬಿಲೋನಿನ ಸ್ಥಳ ತಿರಸ್ಕರಿಸಲ್ಪಟ್ಟ ಪರಿಸ್ಥಿತಿಯು ಮುಂದುವರಿದಿರುವುದು. ಅದು ಎಂದೆಂದಿಗೂ ಪಾಳು ಬಿದ್ದದ್ದಾಗಿರುವುದು. ಪ್ರವಾದಿಗಳ ವಾಕ್ಯದ ಅನುದಿನದ ನೆರವೇರಿಕೆಯಾಗಿರಲು ಯಾವುದೇ ಕಾರಣಕ್ಕಾಗಿಯೂ ಎಂದೂ ಪಾಳುಬಿದ್ದದ್ದಾಗಿ ಮುಂದರಿದಿರುವುದು. ಲಿಖಿತ ಬೈಬಲಿನಲ್ಲಿ ದೇವರ ಕೈಬರಹವು ಕಂಡುಬಂದಿದೆ. ಅದನ್ನು ಬಬಿಲೋನಿನ ನಿರ್ಗತಿಕ ಸ್ಥಳದಲ್ಲಿ ಸ್ಪಷ್ಟವಾಗಿ ನಾವು ನೋಡಬಹುದು.

**ನಿನೆವೆ**

ನಿನೆವೆಯು "ಮೂರು ದಿನಗಳ ನಡಿಗೆಯ" ಅತೀ ದೊಡ್ಡ ಪಟ್ಟಣವಾಗಿತ್ತು (ಯೋನ 3:3). ಅರವತ್ತು ಮೈಲು ಸುತ್ತಳತೆಯುಳ್ಳದ್ದಾಗಿತ್ತು, ಅದರ ನೂರು ಅಡಿ ಎತ್ತರದ ಗೋಡೆಗಳು ಹದಿನೈದು ಶಿಖರಗಳಿಗೆ ಆಧಾರವಾಗಿದ್ದವು. ಪ್ರತಿಯೊಂದು ಇನ್ನೂರು ಅಡಿ ಎತ್ತರವಾಗಿತ್ತು. ಈ ರೀತಿಯ ಬಲವಿದ್ದರೂ ಪಟ್ಟಣದ ಪಾಪಗಳು ದೇವರಿಂದ ನಾಶನವು ಮುಂತಿಳಿಸಲ್ಪಡಲು ಕಾರಣಗಳಾಗಿದ್ದವು. ಆತನು ತುಂಬಿತುಳುಕುವ ಜಲಪ್ರವಾಹದಿಂದಲೂ (ನಹೂಮ 1:1, 8; 2:6) ಮತ್ತು ಬೆಂಕಿಯಿಂದಲೂ (ನಹೂಮ 3:13) ಹಾಳಾಗುವುದು ಎಂದು ಮುಂತಿಳಿಸಿದರು. ಕ್ರಿ.ಪೂ. 612ರಲ್ಲಿ ಇವೆರಡೂ ಸಂಭವಿಸಿದವು. ಟೈಗ್ರಿಸ್ ನದಿಯು ಭಾಗಶಃವಾಗಿ ಪಟ್ಟಣದಲ್ಲಿ ಹರಿದು ಬಂದು, ಅದರ ಗೋಡೆಯ ಭಾಗವನ್ನು ಕೊಚ್ಚಿಕೊಂಡು ಹೋಯಿತು. ಇದರಿಂದ ವೈರಿಯು ಪ್ರವೇಶಿಸಲು ಸಾಧ್ಯವಾಯಿತು. ಅರಸನು ಶವಸಂಸ್ಕಾರದ ಕಟ್ಟಿಗೆಗಳನ್ನು ಒಟ್ಟಿ ಇಟ್ಟನು. ತನ್ನ ಅರಮನೆಗೂ, ಕುಟುಂಬದವರಿಗೂ ಮತ್ತು ತನಗೂ ಬೆಂಕಿ ಹಚ್ಚಿಕೊಂಡನು. ಕೊಳ್ಳೆಯಾಗಿ ಬಂಗಾರವನ್ನು ತೆಗೆದುಕೊಂಡು ಹೋಗುವರೆಂದು ದೇವರು ಮುಂತಿಳಿಸಿದನು (ನಹೂಮ 2:9). ಅದೂ ಹಾಗೆಯೇ ಚರಿತ್ರೆಯಿಂದ ನೆರವೇರಿಸಲ್ಪಟ್ಟಿತು. ನಿನೆವೆಯ ಸ್ಥಳವು ಈಗ ಹಾಳುಗೆಡವಲ್ಪಟ್ಟಿದೆ. ಅದರ ಪ್ರಸಿದ್ಧ ಹೆಸರು ಅಳಿದು ಹೋಗುವ ಭಯದಲ್ಲಿದೆ.

**ದಮಸ್ಕ**

ದಮಸ್ಕವು ಬೆಂಕಿಯಿಂದಲೂ ಶಿಕ್ಷಿಸಲ್ಪಡುವದೆಂದು ಆಮೋಸನು ಪ್ರವಾದಿಸಿದನು (ಆಮೋಸ 1:3-14). ಅದು ಹಾಳು ದಿಬ್ಬವಾಗುವದೆಂದು ಯೆಶಾಯನು ತಿಳಿಸಿದನು (ಯೆಶಾಯ 17:1). ಇಂದಿನವರೆಗೂ ದಮಸ್ಕವು ಅಸ್ತಿತ್ವದಲ್ಲಿದ್ದರೂ ಈ ಪ್ರವಾದನೆಗಳು ನೆರವೇರಿಸಲ್ಪಟ್ಟಿವೆ. ಅದು ಅನೇಕ ಸಲ ಹಾಳುದಿಬ್ಬವಾಯಿತು. ಕ್ರಿ.ಪೂ. ಎಂಟನೆಯ ಶತಮಾನದಲ್ಲಿ ಅಶ್ಶೂರಿನ ಚಕ್ರವರ್ತಿಯು ದಮಸ್ಕವನ್ನು ವಶಪಡಿಸಿಕೊಂಡು ನಿವಾಸಿಗಳನ್ನು ಸೆರೆಯಾಗಿ ಒಯ್ದನು. ದಮಸ್ಕವು ದೊಡ್ಡ ಅಲೆಕ್ಸಾಂಡರನಿಂದ ಮತ್ತು ಸಾರಾಸಿನರಿಂದ ಹಾಳು ಮಾಡಲ್ಪಟ್ಟಿತು.

# ರಾಷ್ಟ್ರಗಳ ಮತ್ತು ಜನಾಂಗಗಳ ಬಗ್ಗೆ ಪ್ರವಾದನೆಗಳು

**ಇಬ್ರಿಯರು**

ಬೇರೆ ಯಾವುದೇ ಜನಾಂಗಗಳಿಗಿಂತಲೂ ಹೆಚ್ಚಾಗಿ ಇಬ್ರಿಯರಿಗೆ ಸಂಬಂಧಿಸಿ ಹೆಚ್ಚು ಪ್ರವಾದನೆಗಳು ಕೊಡಲ್ಪಟ್ಟಿವೆ. ಅವರು ಐಗುಪ್ತದಲ್ಲಿ ಗುಲಾಮರಾಗಿರುವರು (ಆದಿಕಾಂಡ 15:13, 14). ನೇಮಕವಾದ ಸಮಯದಲ್ಲಿ ಅವರು ವಿಮೋಚಿಸಲ್ಪಡುವರು (ಆದಿಕಾಂಡ 46:4). ಅವರಿಗೆ ಕಾನಾನ್ ಕೊಡಲ್ಪಡುವುದು (ಆದಿಕಾಂಡ 15:18). ಇದು ದೊಡ್ಡ ರಾಷ್ಟ್ರವಾಗುವುದು (ಆದಿಕಾಂಡ 46:3). ಅವರು ಎರಡು ರಾಜ್ಯವಾಗುವರು (1 ಅರಸು 11:31). ಅಶ್ಚರ್ಯರ್ಯದಿಂದ ದಕ್ಷಿಣ ರಾಜ್ಯವು ಬಿಡುಗಡೆ ಮಾಡಲ್ಪಡುವುದು. ಆದರೆ ಬಬಿಲೋನಿನ ವಶವಾಗುವುದು (1 ಅರಸು 14:15, 16); ಹೀಗಿದ್ದರೂ ಅದು ಸಂಪೂರ್ಣವಾಗಿ ನಾಶಪಡಿಸಲ್ಪಡುವುದಿಲ್ಲ. ಬಬಿಲೋನನ್ನು ಒಳಗೊಂಡು ಇತರ ರಾಜ್ಯಗಳು ಇಲ್ಲವಾಗುವವು. ಆದರೆ ಯೆಹೂದವು ಹಾಗಾಗುವದಿಲ್ಲ (ಯೆಶಾಯ 13:20). ಯೆಹೂದವು ಎಪ್ಪತ್ತು ವರ್ಷಗಳ ವರೆಗೆ ಬಬಿಲೋನಿನ ಸೇವೆ ಮಾಡುವುದು ಹಾಗೂ ಆಮೇಲೆ ಪುನಃ ಸ್ಥಾಪಿಸಲ್ಪಡುವುದು (ಯೆರೆಮೀಯ 25:11, 12). ದೇವರ ದಂಡನೆಯು ಯೆಹೂದದ ವಿಗ್ರಹಾರಧನೆಯನ್ನು ಎಂದೆಂದಿಗೂ ಶುದ್ಧೀಕರಿಸುವುದು. ಅನಂತರ ಅದು ತನ್ನ ಮೂಲೆಗಲ್ಲನ್ನು ತಿರಸ್ಕರಿಸುವುದು, ಹಾಗೂ ತಿಳಿಯಲ್ಪಡುವುದು (ಕೀರ್ತನೆ 118:22).

ಇಬ್ರೀಯರನ್ನು ಕುರಿತು ಹೇಳಿದ ಪ್ರಾವಾದನೆಗಳ ನೆರವೇರುವಿಕೆಯು ಪರಿಶುದ್ಧ ಬರಹಗಳ ದೈವಪ್ರೇರಣೆಗೆ ಬಲವಾದ ಸಾಕ್ಷಿಯಾಗಿದೆ. ನಾಶನದ ಮತ್ತು ನೋವಿನ, ಹೊಗಳಿಕೊಳ್ಳದ ಮುಂತಿಳಿಸುವಿಕೆಗಳು ಇಬ್ರಿಯರಿಂದ ಇಬ್ರೀಯರಿಗೆ ಮಾಡಲ್ಪಟ್ಟವು. ಅವು ಒಂದರ ನಂತರ ಒಂದು ನೆರವೇರಿಸಲ್ಪಟ್ಟಿವೆ. ದೊಡ್ಡ ಫ್ರೆಡರಿಕನು ಒಂದು ಸಲ ತನ್ನ ಆಸ್ಥಾನ ಚಾಪ್ಲೇನನನ್ನೂ ಬೈಬಲಿನ ದೈವಪ್ರೇರಣೆಗೆ ಪುರಾವೆಯನ್ನು ಸಂಕ್ಷೇಪವಾಗಿ ತನಗೆ ಹೇಳಬೇಕೆಂದು ಕೇಳಿದನು. “ಯೆಹೂದ್ಯರು, ಮಹಾರಾಜರೇ” ಎಂದು ತಟ್ಟನೇ ಉತ್ತರ ಕೊಟ್ಟನು.

**ಅರಾಬರು**

ಇಷ್ಮಾಯೇಲನ ವಂಶ ಜನರನ್ನು ದೇವರು ಯುದ್ಧ ವೀರರನ್ನಾಗಿ ಮಾಡಲಿಲ್ಲ. ಆದರೆ ಅವರು ಹಾಗೆ ಆಗುವರೆಂದು ಆತನು ತಿಳಿದಿದ್ದನು. ಆದುದರಿಂದ ಅದು ಮುಂತಿಳಿಸಲ್ಪಟ್ಟಿತು (ಆದಿಕಾಂಡ 16:12). ಇತರ ರಾಷ್ಟ್ರಗಳಿಗೆ ನಾಶನದ ಮುಂತಿಳಿಸುವಿಕೆಗೆ ವಿರುದ್ಧವಾಗಿ ಅರಬರಿಗೆ ವಿರೋಧವಾಗಿ ನಾಶವಾಗಿ ಹೋಗುವ ಯಾವುದೇ ಭಯವು ಕಂಡು ಬಂದಿಲ್ಲ. ಇತರ ರಾಷ್ಟ್ರಗಳು ಇಲ್ಲವಾಗಿ ಹೋಗುವವು ಆದರೆ ಅರಬರು ದೇವರ ಪ್ರವಾದನೆಗಳೊಂದಿಗೆ ಸಾಮರಸ್ಯದಲ್ಲಿ ಇನ್ನೂ ಬಲಶಾಲೀ ಜನಾಂಗವಾಗಿರುವುದು.

**ಮೋವಾಬ್ಯರು**

ಮೋವಾಬ್ಯರು ಒಮ್ಮೆ ಜನಭರಿತ ಬಲವಾದ ಜನಾಂಗವಾಗಿದ್ದರು. ಅವರ ದೇಶವು ಐಶ್ವರ್ಯವುಳ್ಳದ್ದೂ ಅವರ ಪಟ್ಟಣಗಳೂ ದೊಡ್ಡವಾದವುಗಳೂ ಆಗಿದ್ದವು. ಅವರ ಪಾಪಗಳ ಕಾರಣದಿಂದ ಅವರ ನಾಡು ಮುಳ್ಳುಗಿಡಗಳಿಂದಲೂ ಸೌಳುಗುಂಡಿಗಳಿಂದಲೂ ತುಂಬಿಕೊಂಡಿರುವುದು (ಚೆಫನ್ಯ 2:9) - ಅಂದರೆ ಪ್ರತಿಯೊಂದು ಪಟ್ಟಣವು ನಾಶ

ಗೊಳಿಸಲ್ಪಡುವುದು ಮತ್ತು ಮೋವಾಬು ಒಂದು ಜನಾಂಗವಾಗಿ ಇಲ್ಲವಾಗಿ ಹೋಗುವುದು (ಯೆರೆಮೀಯ 48:42) ಎಂದು ದೇವರು ಪ್ರವಾದನೆ ಹೇಳಿದನು. ಹಾಗೆಯೇ ನೆರವೇರಿ ದ್ದನ್ನು ಈಗ ಪ್ರಯಾಣಿಕರು ಪುರಾತನ ಪಟ್ಟಣಗಳ ಅವಶೇಷಗಳನ್ನು ಮಾತ್ರ ಕಂಡು ಕೊಳ್ಳುತ್ತಾರೆ. ಕೆಲವು ಗವಿಗಳಲ್ಲಿಯೂ ಬಂಡೆಗಳಲ್ಲಿಯೂ ಮಾನವ ವಸತಿಗಾರರು ಇರುವರು. ಆದರೆ ಮೋವಾಬು ಒಂದು ರಾಷ್ಟ್ರದಂತೆ ಇರುವದಿಲ್ಲ.

**ಅಮ್ಮೋನಿಯರು**

ಮೋವಾಬ್ಯರಂತೆ ಅಮ್ಮೋನಿಯರು ಫಲಭರಿತನಾಡಿನಲ್ಲಿ ವಾಸಿಸಿದರು. ಅವರ ನಾಡು ಜನಭರಿತವಾಗಿತ್ತು. ಅವರ ಪಾಪಗಳ ನಿಮಿತ್ತವಾಗಿ, ಅಮ್ಮೋನಿಯರ ಸಂಪೂರ್ಣ ನಾಶನವನ್ನು ಪ್ರವಾದನೆಯ ದೇವರ ವಾಕ್ಯವು ಮುಂತಿಳಿಸಿತು. ರಬ್ಬಾ ಎಂಬ ಪಟ್ಟಣವು ಹಾಳುದಿಬ್ಬವಾಗುವುದು (ಯೆರೆಮೀಯ 49:2). ಹೀಗೆ ಅದು ಕಂಡುಬಂದಿದೆ. ಮುಳ್ಳು ಗಿಡಗಳಿಂದಲೂ ಸೌಳುಗುಂಡಿಗಳಿಂದಲೂ ತುಂಬಿಸಲ್ಪಟ್ಟ ಅಮ್ಮೋನಿಯರ ಪಟ್ಟಣಗಳು "ನಿತ್ಯವಾಗಿ ನಾಶವಾಗುವವು" (ಚೆಫನ್ಯ 2:9) ಎಂದು ಪ್ರವಾದಿಯು ಹೇಳಿದನು. ಇಂದು ಪ್ರತಿಯೊಂದು ದಿಕ್ಕಿನಲ್ಲಿ ನಾಶವಾದ ಅವಶೇಷಗಳಿರುವವು. ಒಂದು ಜನಾಂಗವಾಗಿ ಅಮ್ಮೋನು ಕಡಿಯಲ್ಪಟ್ಟ ರಾಷ್ಟ್ರಗಳಲ್ಲಿ ಜ್ಞಾಪಕಕ್ಕೆ ಉಳಿಯದೇ ಹೋಗುವುದು (ಯೆಹೆಜ್ಕೇಲ 25:7, 10). ಇಂದು ತನ್ನನ್ನು ಯಾರುಸಹ ಅಮ್ಮೋನ್ಯನು ಎಂದು ಕರೆಯುವುದಿಲ್ಲ. ಆ ಜನಾಂಗದ ವಂಶದವರೆಂದು ಯಾವುದೇ ಜನಾಂಗವು ಕರೆದು ಕೊಳ್ಳುವದಿಲ್ಲ.

**ಎದೋಮ್ಯರು**

ಹದಿನೇಳು ನೂರು ವರ್ಷಗಳ ವರೆಗೆ ಎದೋಮ್ಯರು ವಿಶಾಲವಾದ ಮತ್ತು ಬಲವಾದ ರಾಷ್ಟ್ರವಾಗಿದ್ದರು. ಎದೋಮು ಅನೇಕ ಪಟ್ಟಣಗಳನ್ನು ಒಳಗೊಂಡಿತ್ತು. ಅದರ ರಾಜಧಾನಿ ಪೆಟ್ರ (ಸೆಲಾ), ಅದು ಐಗುಪ್ತ, ಪಲೆಸ್ತೀನ ಮತ್ತು ಸಿರಿಯದ ವ್ಯಾಪಾರಿಗಳನ್ನು ಆಕರ್ಷಿಸಿತ್ತು. ವ್ಯಾಪಾರದ ಕೇಂದ್ರವಾಗಿತ್ತು. ಅದಲ್ಲದೆ ಎದೋಮ್ಯರು ಖಗೋಳ ಶಾಸ್ತ್ರಾ ಮತ್ತು ನೌಕಾ ವಿದ್ಯೆಯಲ್ಲಿ ಸಂಶೋಧನೆ ಪ್ರಾರಂಭಿಸಿದ ಹೆಮ್ಮೆ ಪಡೆದು ಕೊಂಡಿದ್ದರು.

ಒಮ್ಮೆ ಮಹಾಜನಾಂಗವಾಗಿದ್ದರೂ ಇದರ ಪಾಪಗಳು ದೇವರ ನ್ಯಾಯ ತೀರ್ವಿಕೆ ಯನ್ನು, ಶಾಪವನ್ನು ತಂದವು. ಐಶ್ವರ್ಯವಂತ ಹಾಗೂ ಸಮೃದ್ಧಿಯುಳ್ಳ ರಾಷ್ಟ್ರವು ಪ್ರವಾದಿಗಳಿಗನುಗುಣವಾಗಿ ತಲೆಮಾರಿನಿಂದ ತಲೆಮಾರಿನ ವರೆಗೆ ಹಾಳಾಗಿ ಹೋಗು ವುದು (ಯೆಶಾಯ 34:5-10). ಜನನಿವಾಸವಿಲ್ಲದೇ ಅದು ಮುಳ್ಳುಗಳ, ದಬ್ಬೆಗಳ, ತೋಳ ಗಳ, ರಾತ್ರಿ ಪಿಶಾಚಿಗಳ ಮತ್ತು ಹಾವುಗಳ ಸ್ಥಳವಾಗಿರುವುದು (ಯೆಶಾಯ 34:13-15; ಯೆರೆಮೀಯ 49 ಸಹ ನೋಡಿರಿ). ಎದೋಮು ನಾಶವಾಗಿ ಹೋಗುವುದು.

ಈ ಉನ್ನತವಾದ ಪ್ರವಾದನೆಗಳ ದುಃಖಕರವಾದ ನೆರವೇರುವಿಕೆಯು ಬೈಬಲಿಗಾಗಿ ಗೌರವವನ್ನು ಕೊಡುತ್ತದೆ. ಇಂದಿಗೆ ಹತ್ತೊಂಭತ್ತು ನೂರು ವರ್ಷಗಳ ವರೆಗೆ ಎದೋಮು ಒಂದು ರಾಷ್ಟ್ರವಾಗಿ ಅಸ್ತಿತ್ವದಲ್ಲಿರುವದಿಲ್ಲ. ಎದೋಮ್ಯರೆಂದು ಹೇಳಿಕೊಳ್ಳುವ ತಿಳಿದ ಯಾವುದೇ ಮಾನವ ಜೀವದಿಂದ ಇರುವದಿಲ್ಲ. ಕೇವಲ ಮನುಷ್ಯನು ಪೆಟ್ರದಂಥ ಐಶ್ವರ್ಯವಂತ ಮತ್ತು ಬಲವಾದ ಪಟ್ಟಣವು ಹಾಳುಮಾಡಲ್ಪಟ್ಟು ನಾಶವಾಗಿ ಹೋಗು ವದನ್ನು ಕಲ್ಪಿಸಿಕೊಂಡಿರಲಿಕ್ಕಿಲ್ಲ. ಅದರ ಸ್ಥಳವು ಶತಮಾನಗಳ ವರೆಗೆ ಇಳಿಯದೇ ಇತ್ತು, ಆದರೆ ಅದರ ಅವಶೇಷಗಳು ಇತರ ಮೂವತ್ತು ಎದೋಮ್ ಪಟ್ಟಣಗಳೊಂದಿಗೆ ಅನಂತರದಲ್ಲಿ ಕಂಡು ಹಿಡಿಯಲ್ಪಟ್ಟಿವೆ. ಕೆಲವು ಅರಬ್ ದನಗಾಹಿಗಳನ್ನು ಬಿಟ್ಟರೆ ಅವು

ಹಾಳುಬಿದ್ದಿವೆ ಹಾಗೂ ಇವರು ಸಹ ಚೇಳುಗಳ ನಿಮಿತ್ತವಾಗಿ ಅವಶೇಷಗಳನ್ನು ಬಿಟ್ಟು ಹೋಗಿದ್ದಾರೆ.

**ಫಿಲಿಷ್ಟಿಯರು**

ಫಿಲಿಷ್ಟಿಯರು ಮೊದಲು ಫಲವತ್ತಾದ ಪ್ರದೇಶದಲ್ಲಿ ಜೀವಿಸುತ್ತಿದ್ದ ದೊಡ್ಡ ಜನಾಂಗ ವಾಗಿದ್ದರು. ಕೋಟೆಗಳುಳ್ಳ ಪಟ್ಟಣಗಳು, ಅಷ್ಕೆಲೋನ್, ಅಷ್‌ಡೋಡ್, ಎಕ್ರೋನ್ ಮತ್ತು ಗಾಜಾಗಳನ್ನೊಳಗೊಂಡಿದ್ದವು. ಅಷ್ಕೆನೋನು ಅದರ ಅತ್ಯುತ್ತಮವಾದ ದ್ರಾಕ್ಷಾರಸಗಳಿಗಾಗಿ ಪ್ರಸಿದ್ಧವಾಗಿತ್ತು. ಅಷ್ಡೋದು "ಚರಿತ್ರೆಯಲ್ಲಿ ಬಹಳ ದೀರ್ಘವಾದ ದಾಳಿಯನ್ನು" ಗಾಜಾದ ಐಶ್ವರ್ಯವು ಗಾರೆಯ ನೆಲಗಳುಳ್ಳ ಮತ್ತು ವಿಶಾಲವಾದ ಸ್ನಾನದ ಕೋಣೆಗಳುಳ್ಳ ಮೂರು ಅಂತಸ್ತಿನ ಮನೆಗಳನ್ನು ಒದಗಿಸಿತ್ತು. ಎರಡು ತಿಂಗಳುಗಳ ವರೆಗೆ ದೊಡ್ಡ ಅಲೆಕ್ಸಾಂಡರನನ್ನು ಎದುರಿಸುವಷ್ಟು ಅದರ ಕೋಟೆಗಳು ಬಲವಾಗಿದ್ದವು.

ಪಾಪವು ಯಾವುದೇ ಜನಾಂಗದ ಶಾಪವಾಗಿದೆ, ಹಾಗೂ ದೇವರಿಂದ ನಾಶನವನ್ನು ತರುತ್ತದೆ. ದ್ವೇಷ, ದಂಗೆ, ಮತ್ತು ಇತರ ಪಾಪಗಳಿಗಾಗಿ ಫಿಲಿಷ್ಟಿಯರು ದೇವರ ಪ್ರವಾದಿತ ವಾಕ್ಯದಿಂದ ನಾಶನಕ್ಕೆ ಗುರಿಪಡಿಸಲ್ಪಟ್ಟಿತು. ಅದರ ಬಲಶಾಲೀ ಪಟ್ಟಣಗಳು ದೀನತೆಗೆ ತರಲ್ಪಟ್ಟು ನಶಿಸಿಹೋದವು. ಎಕ್ರೋನ್, ಅಷ್ಕೆಲೋನ್. ಅಷ್ಡೋಡ್ ಮತ್ತು ಗಾಜಾ ಇವು ಪ್ರತ್ಯೇಕವಾಗಿ ಪ್ರವಾದಿಗಳಿಂದ ಹೆಸರಿಸಲ್ಪಟ್ಟಿವೆ (ಜೆಫನ್ಯ 2:4). ಫಿಲಿಷ್ಟಿಯವು ಮರುಭೂಮಿಯಾಗಿದ್ದು ಬೆಡೂಮಿನ್ ಅರಬರಿಗೆ ತ್ಯಜಿಸಿಬಿಟ್ಟದ್ದನ್ನು ಅವರು ಪಶುಗಳನ್ನು ಅದರಲ್ಲಿ ಮೇಯಿಸುವದನ್ನು ಪ್ರಯಾಣಿಕರು ಕಂಡುಕೊಂಡಿದ್ದಾರೆ. ಅಷ್ಡೋದಿನ ಅವಶೇಷಗಳು ಅದರ ಚೇಳುಗಳಿಗಾಗಿ ವಿಶೇಷವಾದವುಗಳಾಗಿವೆ. ನಿಶ್ಚಯವಾಗಿ ಯಾವ ದಿಬ್ಬವು ಒಮ್ಮೆ ಪುರಾತನ ಎಕ್ರೋನ್ ಆಗಿತ್ತು ಎಂಬುದರ ಬಗ್ಗೆ ವಾದವಿರುತ್ತದೆ. ದೊಡ್ಡ ಅಲೆಕ್ಸಾಂಡರನು ಗಾಜಾವನ್ನು ಸಂಪೂರ್ಣವಾಗಿ ನಾಶಪಡಿಸಿದನು. ಮತ್ತು ಅದರ ಸ್ಥಳವು ಸಮುದ್ರದಿಂದ ಎರಡು ಮೈಲು ದೂರದಲ್ಲಿ ಇದ್ದದ್ದು ಹಾಳುಗೆಡವಲ್ಪಟ್ಟಿತು. ಒಂದು ಮೈಲು ದೂರದಲ್ಲಿ ಅದು ಪುನಃ ಕಟ್ಟಲ್ಪಟ್ಟಿತು. ಅದು ಹೊಸ ಸ್ಥಳದ ಮೇಲೆ ಇತ್ತೆಂದು ಕೆಲವು ಲೇಖಕರು ಅರಿತುಕೊಳ್ಳದ್ದರಿಂದ ಸ್ಪಷ್ಟವಾದ ಬರಹಗಾರರು, "ಹಳೇ ಗಾಜಾ" ಮತ್ತು "ಹೊಸ ಗಾಜಾ" ಎಂದು ಹೇಳಿದರು. ಹಳೇ ಪಟ್ಟಣವನ್ನು "ಮರು ಭೂಮಿಯಾಗಿರುವ ಗಾಜಾ" ಎಂದು ಕೆಲವರು ಸ್ಪಷ್ಟಪಡಿಸಿದ್ದಾರೆ.

**ಐಗುಪ್ತರು**

ಒಂದು ಸಮಯದಲ್ಲಿ ಸಮೃದ್ಧ ಐಗುಪ್ತದಲ್ಲಿ ಇಪ್ಪತ್ತು ಸಾವಿರ ಪಟ್ಟಣಗಳಿದ್ದವು; ಆದರೆ, ದೇವರ ಪ್ರವಾದಿ ವಾಕ್ಯಕ್ಕೆ ಅನುಗುಣವಾಗಿ ಐಗುಪ್ತವು ಹಾಳುಬಿದ್ದ ದೇಶವಾಯಿತು (ಯೆಹೆಜ್ಕೇಲ 29:12). ಈ ದಿನದ ವರೆಗೆ ಐಗುಪ್ತದ ಹೆಚ್ಚಾದ ಭಾಗವು ಹಾಳಾದದ್ದಾಗಿಯೇ ಇರುವುದು. ದೇವರ ಪ್ರವಾದಿಗಳು ಒಮ್ಮೆ ಗರ್ವಗಳ ಆ ನಾಡಿನಲ್ಲಿ ಸ್ಥಳೀಯ ಆಡಳಿತೆಗಾರರು ಇಲ್ಲದಿರುವದರ ಬಗ್ಗೆ ಮುಂತಿಳಿಸಿದರು (ಯೆಹೆಜ್ಕೆಲು 29:15). ಎರಡು ಸಾವಿರ ವರ್ಷಗಳಿಗಿಂತ ಹೆಚ್ಚಾಗಿ ಈ ಮುಂತಿಳಿಸುವಿಕೆಯು ನೆರವೇರಿಸಲ್ಪಟ್ಟಿದೆ.

ಬಬಿಲೋನ, ನಿನೆವೆ, ಮೋವಾಬ್, ಅಮ್ಮೋನ, ಮತ್ತು ಏದೋಮ್‌ಗಳಿಗಾಗಿ ಕಠಿಣ ವಾದ ನಾಶನದ ಮುಂತಿಳಿಸುವಿಕೆಗಳಿಗೆ ವಿರುದ್ಧವಾಗಿ ಸಂಪೂರ್ಣವಾಗಿ ನಾಶವಾಗಿ ಹೋಗುವುದು. ಐಗುಪ್ತಕ್ಕೆ ವಿರೋಧವಾಗಿ ಹೇಳಲ್ಪಡಲಿಲ್ಲ. ಸಂಪೂರ್ಣ ನಾಶನವನ್ನಲ್ಲ ಆದರೆ ಐಗುಪ್ತದ ಅಧೋಗತಿಯನ್ನು ಪ್ರವಾದಿಗಳು ಮುಂತಿಳಿಸಿದರು. ಅದು ರಾಜ್ಯಗಳಲ್ಲಿ

ನಿಕೃಷ್ಟವಾದ ರಾಜ್ಯವಾಗುವುದು (ಯೆಹೆಜ್ಕೇಲ 29:15). ಅದರಂತೆ ಅದು ಎರಡು ಸಾವಿರ ವರ್ಷಗಳಿಗಿಂತ ಹೆಚ್ಚು ಕಾಲ ಹಾಗೆ ಇರುವುದು. ಉನ್ನತಿಗೆ ಅದನ್ನು ಪುನಃ ಸ್ಥಾಪಿಸಲು ಮಾಡಿದ ಬಲಶಾಲಿ ನೆಪೋಲಿಯನ್ನನ ಪ್ರಯತ್ನಗಳನ್ನೊಳಗೊಂಡು ಎಲ್ಲಾ ಪ್ರಯತ್ನಗಳು ಸೋತು ಹೋಗಿವೆ.

**ಕ್ರೈಸ್ತರು**

ಹಳೇ ಒಡಂಬಡಿಕೆಯ ಪ್ರವಾದಿಗಳು ಭವಿಷ್ಯದ ರಾಜ್ಯದ ಮಹಾ ಸಂಗತಿಗಳ ಬಗ್ಗೆ ಮುಂತಿಳಿಸಿದರು. ಅದರ ಒಬ್ಬನೇ ಸಾಮ್ರಾಟನು ಎರಡನೆಯ ದಾವೀದನು. ಆತನ ಸಿಂಹಾಸನವು ಕೃಪಾಧಾರದ ಮೇಲೆ ಸ್ಥಾಪಿಸಲ್ಪಡುವುದು (ಯೆಶಾಯ 16:5). ಆತನು ಪರಾಕ್ರಮಿಯಾದ ದೇವರು ಎಂದು ಕರೆಯಲ್ಪಡುವನು (ಯೆಶಾಯ 9:6). ಆತನ ಪ್ರಜೆಗಳು ಮನಸ್ಸುಳ್ಳವರಾಗಿರುವರು (ಯೆಶಾಯ 2:3). ಆತನ ಆಡಳಿತೆಯು ಆತ್ಮಿಕ ವಾದದ್ದಾಗಿರುವುದು (ನೋಡಿರಿ ಯೆಶಾಯ 2:4). ಆತನ ಆಡಳಿತೆಯು ಅಂತರಾಷ್ಟ್ರೀಯವಾಗಿರುವುದು, ನಾಶಪಡಿಸಲ್ಪಡುವಂಥದ್ದಲ್ಲ ಹಾಗೂ ನಿತ್ಯವಾದದ್ದು ಆಗಿರುವುದು, ರೋಮ್ ಸಾಮ್ರಾಜ್ಯದ ದಿನಗಳಲ್ಲಿ ಪ್ರಾರಂಭವಾಗುವುದು (ದಾನಿಯೇಲ 2:44).

ಆ ಪ್ರವಾದನೆಗಳ ನೆರವೇರಿವಿಕೆಯು ಅತ್ಯಾಶ್ಚರ್ಯಕರವಾದದ್ದಾಗಿದೆ! ರೋಮ್ ಸಾಮ್ರಾಜ್ಯದ ದಿನಗಳಲ್ಲಿ ಈ ಲೋಕದ ರಾಜ್ಯವಲ್ಲದ ರಾಜ್ಯವು ಪರಲೋಕದಿಂದ ಇಳಿದು ಬಂದು - ದಾವೀದನ ದೈವಿಕ ಕುಮಾರನಾದ ಅರಸನೊಂದಿಗೆ ನೀತಿಯ, ಆನಂದದ ಮತ್ತು ಸಮಾಧಾನದ ಆಡಳಿತೆಯು ಭೂಲೋಕದ ಮೇಲೆ ಪ್ರಾರಂಭಿಸಲ್ಪಟ್ಟಿತು. ಈ ಪರಲೋಕ ರಾಜ್ಯದ ಪ್ರಜೆಗಳು ಕ್ರೈಸ್ತರೆಂದು ಕರೆಯಲ್ಪಟ್ಟಿದ್ದಾರೆ. ಅಂಥ ರಾಜ್ಯದ ಪ್ರವಾದನೆಯು ಬಲವಾದದ್ದಾಗಿತ್ತು ಮತ್ತು ಪ್ರತಿಯೊಂದು ನೆರವೇರುವಿಕೆಯ ಸ್ಪಷ್ಟತೆಯು ನಂಬಲಸಾಧ್ಯವಾದದ್ದಾಗಿದೆ.

## ವ್ಯಕ್ತಿಗಳಿಗೆ ಹೆಸರುಗಳನಿಟ್ಟ ಪ್ರವಾದನೆಗಳು

ನಿಶ್ಚಿತವಾದ ಪ್ರವಾದನೆಯು ಹೆಸರು ಹೇಳಲ್ಪಟ್ಟ ಪಟ್ಟಣಗಳ ಅಂತ್ಯಗಳನ್ನು ಮುನ್ನೋಡಲು ಶಕ್ತವಾಗಿತ್ತು ಅಷ್ಟೇ ಅಲ್ಲ, ಹೆಸರು ಹೇಳಿದ ಜನರ ಅಂತ್ಯಗಳನ್ನು ಮುನ್ನೋಡಲು ಮಾತ್ರವೇ ಅಲ್ಲ, ಆದರೆ ನಿರ್ದಿಷ್ಟವಾದ ವ್ಯಕ್ತಿಗಳ ಬಗ್ಗೆ ಮುನ್ನೋಡಲು ಶಕ್ತವಾಗಿತ್ತು.

**ಯೋಷೀಯ**

ಘಟನೆ ಸಂಭವಿಸುವದಕ್ಕಿಂತ ಮುನ್ನೂರು ವರ್ಷಗಳ ಮೊದಲು "ಯೆಹೋವನ ಅಪ್ಪಣೆಯಿಂದ" (1 ಅರಸು 13:1) ದಾವೀದನ ಸಂತತಿಯವರಲ್ಲಿ ಒಬ್ಬನ ಹೆಸರನ್ನು ಹಾಗೂ ಅವನು ಏನು ಮಾಡುವನು ಎಂಬುದನ್ನು "ಒಬ್ಬ ದೇವರ ಮನುಷ್ಯನು" ಪ್ರಕಟಿಸಿದನು. ದಾವೀದನ ಕುಟುಂಬಕ್ಕೆ ಒಬ್ಬ ಕುಮಾರನ ಜನನದ ಬಗ್ಗೆ ಪ್ರವಾದನೆಯು ಹೇಳಲ್ಪಟ್ಟಿತು; ಅವನಿಗೆ ಯೋಷೀಯ ಎಂಬ ಹೆಸರು ಕೊಡಲ್ಪಡುವುದು ಎಂದು ಸ್ಪಷ್ಟವಾಗಿ ಹೇಳಲ್ಪಟ್ಟಿತು, ಮತ್ತು ವಿಗ್ರಹಾರಾಧನೆಯನ್ನು ತೆಗೆದು ಹಾಕುವದರಲ್ಲಿ ದೇವರಿಗಾಗಿರುವ ಅವನ ಆಸಕ್ತಿಯನ್ನು ಮುಂತಿಳಿಸಿತು (1 ಅರಸು 13:2). ಈ ಸಂಗತಿಗಳು ಕೇವಲ ಮನುಷ್ಯನು ತಿಳಿಯಲಾರನು.

**ರೇಕಾಬ**

ಕ್ರಿಸ್ತನಿಗಿಂತ ಆರು ನೂರು ವರ್ಷಗಳ ಮೊದಲು, ಕೆಲವು ಜನ ಗಂಡುಮಕ್ಕಳು ತಮ್ಮ ತಂದೆಗೆ ವಿಧೇಯರಾದುದರಿಂದ, ದೇವರ ಪ್ರವಾದಿಯು ಆ ಕುಟುಂಬವನ್ನು ಸದಾಕಾಲಕ್ಕೂ ಆಶೀರ್ವದಿಸಿದನು (ಯೆರೆಮೀಯ 35:18, 19). ಹತ್ತೊಂಭತ್ತನೆಯ ಶತಮಾನದಲ್ಲಿ ಮೆಕ್ಕಾದ ಸಮೀಪದಲ್ಲಿ ತಾವು ರೇಕಾಬನ ವಂಶದಿಂದ ಬಂದವರೆಂದು ಹೇಳಿಕೊಂಡ ಸುಮಾರು ಅರವತ್ತು ಸಾವಿರ ಜನರು ಕಂಡು ಬಂದರು. ಶುದ್ಧ ಯೆಹೂದಿ ಧರ್ಮವನ್ನು ಆಚರಿಸುತ್ತಿದ್ದರು ಮತ್ತು ಹಿಬ್ರೂ ಭಾಷೆಯನ್ನು ತಿಳಿದಿದ್ದರು.

**ಚಿದ್ಕೀಯ**

ದುಷ್ಟನಾದ ಚಿದ್ಕೀಯನು ದೇವರನ್ನು ಅಗೌರವಿಸಿದ್ದಕ್ಕಾಗಿ ದುಃಖಕರವಾದ ಪ್ರತಿಫಲವನ್ನು ಹೊಂದಿಕೊಳ್ಳುವನು, ಚಿದ್ಕೀಯನು ಸೆರೆಯವನಾಗಿ ಬಬಿಲೋನ ಪಟ್ಟಣಕ್ಕೆ ಒಯ್ಯಲ್ಪಡುವನು ಮತ್ತು ಅಲ್ಲಿ ಸಾಯುವನು. ಆದಾಗ್ಯೂ ಬಬಿಲೋನನ್ನು ಎಂದೂ ನೋಡುವದಿಲ್ಲ ಎಂದು ಪ್ರವಾದಿಯು ಹೇಳಿದನು (ಯೆಹೆಜ್ಕೇಲ 12:13). ಈ ವಿಚಿತ್ರವಾದ ಪ್ರವಾದನೆಯು ಅನ್ಯ ಅರಸನಾದ ನೆಬೂಕದ್ನೆಚ್ಚರನು ಏನು ಮಾಡುವನು ಎಂಬುದರ ಬಗ್ಗೆ ಮೊದಲಿನ ತಿಳುವಳಿಕೆಯನ್ನು ಹೊಂದಿಕೊಂಡಿತ್ತು. ಅದೃಷ್ಟಹೀನ ಸೆರೆಯವನು ಬಬಿಲೋನಿಗೆ ಒಯ್ಯಲ್ಪಡುವ ಮೊದಲು ಚಿದ್ಕೀಯನ ಕಣ್ಣುಗಳನ್ನು ಕೀಳಿಸುವದರಿಂದ ಇಬ್ರಿಯ ಪ್ರವಾದನೆಯನ್ನು ಅನ್ಯ ಮಹಾರಾಜನು ನೆರವೇರಿಸಲು ರಹಸ್ಯ ವಿಚಾರ ಮಾಡಿರಲಿಲ್ಲವೆಂಬುದು ನಮಗೆ ನಿಶ್ಚಯವಾಗಿರಬೇಕು.

**ಅಂತಿಯೋಕಸ್**

“ಹುಚ್ಚನಾದ“[2] ಅಂತಿಯೋಕಸ್ IVನ ಬಗ್ಗೆ ದಾನಿಯೇಲನ ಪ್ರವಾದನೆಯು ನಿಶ್ಚಿತವಾದದ್ದೂ ಸ್ಪಷ್ಟವಾದದ್ದೂ ಆಗಿತ್ತು. ಅಂತಿಯೋಕಸನ ಆಳಿಕೆಗಿಂತ ನಾನೂರು ವರ್ಷಗಳ ಮೊದಲು ಅದು ಬರೆಯಲ್ಪಟ್ಟಿರಲಿಕ್ಕಿಲ್ಲ ಎಂದು ಅವಿಶ್ವಾಸಿಗಳು ಸುಮ್ಮನೇ ಒಪ್ಪಿಕೊಳ್ಳುತ್ತಾರೆ (ನೋಡಿರಿ ದಾನಿಯೇಲ 8 ಹಾಗೂ 11). ಅದು ಬಹಳ ಸ್ಪಷ್ಟವಾಗಿತ್ತು, ವಿವರಣೆಯು ಚರಿತ್ರೆಯಾಗಿದ್ದಿರಬೇಕು, ಪ್ರವಾದನೆಯಾಗಿರಲಿಕ್ಕಿಲ್ಲ ಎಂದು ವಿಮರ್ಶಕರು ಒಪ್ಪಿಕೊಳ್ಳುತ್ತಾರೆ.

ದಾನಿಯೇಲಿನ ಪುಸ್ತಕದ ಕರ್ತೃತ್ವವನ್ನು ಯಾವುದೇ ದಾಖಲೆಯ ಪುರಾವೆಯು ಅಲ್ಲಗಳೆಯುವದಿಲ್ಲ. ದಾನಿಯೇಲನ ಹೆಸರಿನಿಂದ ಅನಂತರದಲ್ಲಿ ಬರೆಯುತ್ತಿರುವ ಖೊಟ್ಟಿ ಲೇಖಕನ ವಿಚಾರವು ಹಾಗೂ ಅಂಥ ಪುಸ್ತಕವು ಬೈಬಲಿನೊಳಗೆ ಕೂಡಿಸಲ್ಪಡಲು ಬಿಡುವ ದೇವರ ವಿಚಾರವು, ದೇವರ ಸ್ವಭಾವ ಮತ್ತು ಆತನ ವಾಕ್ಯಕ್ಕೆ ವಿರುದ್ಧವಾದವುಗಳಾಗಿವೆ. ದಾನಿಯೇಲನ ಪ್ರವಾದನೆಯು ಸರಿಯಾದದ್ದಾಗಿದೆ ಹಾಗೂ ಪರಲೋಕದ ದಾಖಲೆಯಾಗಿದೆಯೆಂಬ ಅದರ ಪುರಾವೆಯನ್ನು ಹಾಳುಮಾಡುವದರಲ್ಲಿ ಒಂದೇ ಮಾರ್ಗವು ಅದು ಖೋಟಿ ಬರಹವಾಗಿದೆಯೆಂದು ಸುಳ್ಳು ಹೇಳುವುದಾಗಿದೆ ಎಂಬುದು ಸರಳವಾದ ಸತ್ಯವಾಗಿದೆ.

**ಯೇಸು**

ಸಾಮಾನ್ಯ ನಿರೀಕ್ಷೆ. ಬರಲಿಕ್ಕಿದ್ದ ಮೆಸ್ಸೀಯನ ಬಗ್ಗೆ ಹಿಬ್ರೂ ಪ್ರವಾದನೆಯ ಬರಹಗಳು ಸಾಮಾನ್ಯ ನಿರೀಕ್ಷೆಯನ್ನೂ ಬರುವದರ ಯೋಜನೆಯನ್ನೂ ಹುಟ್ಟಿಸಿದವು.

“ಬರಬೇಕಾದವನು ನೀನೋ? ...” (ಮತ್ತಾಯ 11:3) ಎಂಬ ಪ್ರಶ್ನೆಯು ಸಾಮಾನ್ಯ ವಿಶ್ವಾಸವನ್ನು ಪ್ರಕಟಿಸುತ್ತದೆ. ಅನ್ಯರು ಹಾಗೂ ಯೆಹೂದ್ಯರು ಜಗತ್ತನ್ನು ಆಶೀರ್ವದಿಸುವದಕ್ಕೆ ವಿಶೇಷವಾದಾತನೊಬ್ಬನ ಬರೋಣದ ನಿರೀಕ್ಷೆಯಲ್ಲಿದ್ದರು.

ಸಮಯವು ಸ್ಪಷ್ಟಪಡಿಸಲ್ಪಟ್ಟಿತು. ಪ್ರೇರೇಪಿತ ಪ್ರವಾದಿಗಳು ಮೆಸ್ಸೀಯನ ಬರೋಣವನ್ನು ಮುಂತಿಳಿಸಿದರು. ಅಷ್ಟೇ ಅಲ್ಲ ಆತನ ಬರೋಣದ ಸಮಯವನ್ನೂ ಘೋಷಿಸಿದರು. ಅದು ರೋಮನ್ ಸಾಮ್ರಾಜ್ಯವು ಅಸ್ತಿತ್ವದಲ್ಲಿದ್ದಾಗ ಬರಲಿಕ್ಕಿತ್ತು (ಅದು ಕ್ರಿ.ಪೂ. 65-ಕ್ರಿ.ಶ. 476). ಎಲ್ಲಾ ರಾಷ್ಟ್ರಗಳ ಅಪೇಕ್ಷೆಯು ಎರಡನೆಯ ದೇವಾಲಯವು ಇನ್ನೂ ನಿಂತಿರುವಾಗ ಬರುವುದು; ಅದು ಕ್ರಿ.ಶ. 70ರ ಮೊದಲು. ವಂಶಾವಳಿಯ ಸುರುಳಿಗಳು ನಾಶಪಡಿಸಲ್ಪಡುವ ಮೊದಲು ಯೆಹೂದದೊಳಗಿನ ದೇಶಾಧಿಪತಿ ಬರುವನು; ಇದು ಕ್ರಿ.ಶ. 70ರ ಮೊದಲು. ಅಭಿಷಿಕ್ತನು, ಅರಸನು ಯೆರೂಸಲೇಮಿನ ನಾಶನಕ್ಕಿಂತ ಮೊದಲು ಬರುವನು: ಇದು ಕ್ರಿ.ಶ. 70 ಮೊದಲು. ಆದುದರಿಂದ ಕ್ರಿ.ಪೂ. 65ರಲ್ಲಿ ರೋಮನ್ ಸಾಮ್ರಾಜ್ಯವು ಸ್ಥಾಪಿಸಲ್ಪಡುವದರ ಹಾಗೂ ಕ್ರಿ.ಶ. 70ರಲ್ಲಿ ಯೆರೂಸಲೇಮ ನಾಶಪಡಿಸಲ್ಪಡುವದರ ಮಧ್ಯದಲ್ಲಿ ಜಗತ್ತು ತನ್ನ ರಕ್ಷಕನನ್ನು ನಿರೀಕ್ಷಿಸುವುದು.

ಕೆಲವು ವರ್ಣನೆಗಳು ಮತ್ತು ಬಿರುದುಗಳು. ಯೇಸುವಿಗೆ ಈ ಕೆಳಗಿನಂತೆ ಕೆಲವು ವಿವರಣೆಗಳೂ ಬಿರುದುಗಳೂ ಮುಂತಿಳಿಸಲ್ಪಟ್ಟಿವೆ: ಶಿಲೋವನೆಂಬವನು (ಆದಿಕಾಂಡ 49:10), ಯಾಕೋಬನ ನಕ್ಷತ್ರ (ಅರಣ್ಯಕಾಂಡ 24:17; KJV), ಪ್ರವಾದಿ (ಧರ್ಮೋಪ ದೇಶಕಾಂಡ 18:15), ಬರಲಿಕ್ಕಿರುವಾತನು (ಕೀರ್ತನೆ 118:26; KJV), ದಾವೀದನ ಒಡೆಯನು (ಕೀರ್ತನೆ 110:1), ದೇವರ ಕುಮಾರನು (ಕೀರ್ತನೆ 2:7, 12), ಚೀಯೋನಿನ ಅರಸನು (ಕೀರ್ತನೆ 2:6) ಮೆಸ್ಸೀಯನು (ಕೀರ್ತನೆ 2:2), ಆರಾಧಿಸತಕ್ಕವನು (ನೋಡಿರಿ ಕೀರ್ತನೆ 2:12), ಇಮ್ಮಾನುಯೇಲನು (ಯೆಶಾಯ 7:14), ಎಡಹುವ ಕಲ್ಲು (ಯೆಶಾಯ 8:14), ಅದ್ಭುತ ಸ್ವರೂಪನು, ಆಲೋಚನಾ ಕರ್ತನು (ಯೆಶಾಯ 9:6), ಸರ್ವಶಕ್ತನಾದ ದೇವರು (ಯೆಶಾಯ 9:6). ನಿತ್ಯನಾದ ತಂದೆ (ಯೆಶಾಯ 9:6), ಸಮಾಧಾನದ ಪ್ರಭು (ಯೆಶಾಯ 9:6). ಜನಾಂಗಗಳ ಧ್ವಜಪ್ರಾಯನು (ಯೆಶಾಯ 11:10), ಅಮೂಲ್ಯವಾದ ಮೂಲೆಗಲ್ಲು (ಯೆಶಾಯ 28:16), ದೇವರ ಸೇವಕ (ಯೆಶಾಯ 42:1), ದೇವರಾಯ್ದುಕೊಂಡಾತನು (ಯೆಶಾಯ 42:1), ನೀತಿವಂತನು (ಯೆಶಾಯ 42:6), ಅನ್ಯಜನಾಂಗಗಳಿಗೆ ಬೆಳಕು (ಯೆಶಾಯ 49:6), ರಕ್ಷಕನು (ಯೆಶಾಯ 49:6), ಕರ್ತನ ಬಾಹು (ಯೆಶಾಯ 53:1), ಕುರಿಮರಿ (ಯೆಶಾಯ 53:7), ಸಾಕ್ಷಿ (ಯೆಶಾಯ 55:4), ಸೇನಾಪತಿ (ಯೆಶಾಯ 55:4), ನಾಯಕ (ಯೆಶಾಯ 55:4), ಸುವಾರ್ತೆಯ ಪ್ರಸಂಗಿ (ಯೆಶಾಯ 61:1), ವಿಮೋಚಕ (ಯೆಶಾಯ 62:11), ಕರ್ತನ (ಯೆರೆಮೀಯ 23:6), ದಾವೀದ (ಹೋಶೇಯ 3:5), ಆಳುವ ಅರಸ (ಯೆರೆಮೀಯ 30:21), ಕೊಂಬೆ (ಯೆರೆಮೀಯ 23:5), ಕುರುಬ (ಯೆಹೆಜ್ಕೇಲ 34:23), ಮನುಷ್ಯಕುಮಾರ (ದಾನಿಯೇಲ 7:13), ನಿತ್ಯವಾಗಿ ಆಳುವಾತನು (ಮೀಕ 5:2), ಎಲ್ಲಾ ಜನಾಂಗಗಳ ಅಪೇಕ್ಷೆಯು (ಹಗ್ಗಾಯ 2:7; KJV). ಆಲಯದ ಒಡೆಯ (ಮಲಾಕಿ 3:1), ಒಡಂಬಡಿಕೆಯ ಸಂದೇಶವಾಹಕ (ಮಲಾಕಿ 3:1), ನೀತಿಯ ಸೂರ್ಯ (ಮಲಾಕಿ 4:2) (ಇದಲ್ಲದೇ, ಈ ಪಸ್ತುಕದಲ್ಲಿ ಕಂಡು ಬರುವ, “ಮೆಸ್ಸೀಯನ ಪ್ರವಾದನೆಗಳು,” ಮತ್ತು “ಆಯ್ಕೆಮಾಡಿದ ಮೆಸ್ಸೀಯನ ಬಗೆಗಿನ ಪ್ರವಾದನೆಗಳು ಹಾಗೂ ಅವುಗಳ ನೆರವೇರುವಿಕೆ ಗಳು” ಎಂಬವುಗಳನ್ನು ನೋಡಿರಿ).

ಸಂಭವನೀಯತೆಗಳ ನಿಯಮ: ಕೇವಲ ಐವತ್ತು ಪ್ರವಾದನೆಗಳು ಯೇಸುವಿನ ಬಗ್ಗೆ ಹೇಳಲ್ಪಟ್ಟಿದ್ದರೆ, ಅವು ಸಂಭವಿಸಲಿಕ್ಕೆ ಇಲ್ಲವೇ ಸಂಭವಿಸದಿರಲಿಕ್ಕೆ ಸರಿಯಾದ ಅವಕಾಶವಿದೆಯೆಂದು ತೆಗೆದುಕೊಂಡರೆ, ಆ ಎಲ್ಲಾ ಐವತ್ತು ಪ್ರವಾದನೆಗಳು

ನೆರವೇರಲ್ಪಡಲಿಕ್ಕಿಲ್ಲ. ಅದಕ್ಕೆ ವಿರುದ್ಧವಾದ ಸಾಧ್ಯತೆಯು, "(ಅಪರಿಮಿತತೆಗೆ) ಎರಡರ ಐವತ್ತನೆಯ ಘಾತವಾಗಿರುವುದು; ಅಂದರೆ ಈ ಎಲ್ಲಾ ಸನ್ನಿವೇಶಗಳು ತಿರುಗಿಕೊಳ್ಳು ವದಕ್ಕೆ 1,125,000,000ಕ್ಕಿಂತ ಹೆಚ್ಚು ದೊಡ್ಡದಾಗಿರುವುದು,"[3] ಐವತ್ತು ಘಟನೆಗಳು ಒಂದೇ ಕಾಲಕ್ಕೆ ಸಂಭವಿಸುತ್ತವೆಂದು ಊಹಿಸುವುದು "ಅದು ಸಂಭವಿಸುವ ಅತಿಯಾದ ಅಸಾಧ್ಯತೆಯ ಸರಿಯಾದ ಪ್ರಕಟನೆಯ ಸಂಖ್ಯೆಯ ಘಾತವನ್ನು ದಾಟಿ ಹೋಗುತ್ತದೆ."[4] ಈ ಲೆಕ್ಕಾಚಾರಗಳು ದೇವರಪರವಾಗಿ ಹಾಗೂ ದೇವರಿಗೆ ವಿರುದ್ಧವಾಗಿ ಸ್ವತಂತ್ರಕಾರಭಾರಿಯ ಚಿತ್ತ ಮತ್ತು ಕಾರ್ಯವನ್ನು ಯೋಚಿಸುವದಿಲ್ಲ. ಅಂದರೆ "ಸಮೂಹಗಳ ಆಶೆಗಳನ್ನು, ರಾಜಕುಮಾರರ ಗುರಿಯನ್ನು ಜ್ಞಾನಿಯ ಅಧ್ಯಯನಗಳನ್ನು, ದುಷ್ಟರ ಕುಯಕ್ತಿಯನ್ನು, ಯುದ್ಧ ಗಳನ್ನು, ಕ್ರಾಂತಿಗಳನ್ನು ಹಾಗೂ ರಾಷ್ಟ್ರಗಳ ವಿವಿಧ ಅಂತ್ಯ ಸ್ಥಿತಿಗಳನ್ನು ಯೋಚಿಸುವದಿಲ್ಲ."[5]

ಕೇವಲ ಒಂದುನೂರು ಪ್ರವಾದನೆಗಳು ಹೇಳಲ್ಪಟ್ಟಿದ್ದರೆ, ಜಗತ್ತು ಸಂಪೂರ್ಣವಾಗಿ ನೀರೇ ಆಗಿದ್ದರೆ, ಅಸ್ತಿತ್ವದಲ್ಲಿರುವ ನೀರಿನ ಹನಿಗಳ ಸಂಖ್ಯೆಯಲ್ಲಿ ಒಂದಕ್ಕಿಂತ ಕಡಿಮೆಯಾಗಿ ಅವು ಒಬ್ಬ ಮನುಷ್ಯನಲ್ಲಿ ಸಂಭವಿಸುವ ಅವಕಾಶವಿತ್ತು.

ಇದನ್ನು ಯೋಚಿಸಿರಿ: 50 ಇಲ್ಲವೇ 100 ಅಲ್ಲ, ಆದರೆ ಕ್ರಿಸ್ತನ ಕುರಿತು 332 ಪ್ರವಾದನೆಗಳು ಎಣಿಸಲ್ಪಟ್ಟಿವೆ. ಆದುದರಿಂದ, "ಆತನ (ದೇವರ) ಚಿತ್ತದಂತೆ ನಡೆಯುವದಕ್ಕೆ ಯಾರಿಗೆ ಮನಸ್ಸಿದೆಯೋ ಅವರಿಗೆ ಈ ಬೋಧನೆಯು ದೇವರಿಂದ ಬಂದದ್ದೋ ನಾನೇ ಕಲ್ಪಿಸಿ ಹೇಳಿದ್ದೋ ಗೊತ್ತಾಗುವುದು" (ಯೋಹಾನ 7:17) ಎಂದು ಯೇಸು ಒಪ್ಪಿಕೊಂಡದ್ದರಲ್ಲಿ ಆಶ್ಚರ್ಯವಿಲ್ಲ. ನೈಸರ್ಗಿಕ ಜಗತ್ತಿನಲ್ಲಿ ನಾಸ್ತಿಕರನ್ನು ನೆವವಿಲ್ಲದೇ ಪುರಾವೆಗಳು ಬಿಡುವಂತೆ, ಪ್ರವಾದಿಕ ಜಗತ್ತಿನಲ್ಲಿ ಪುರಾವೆಗಳು ಧರ್ಮನಿಂದಕರನ್ನು ನೆವವಿಲ್ಲದೇ ಬಿಟ್ಟುಬಿಡುವವು.

ಯೇಸು ಪ್ರವಾದನೆಗಳನ್ನು ನೆರವೇರಿಸಿದನು ಎಂಬುದು ಸಾಮಾನ್ಯವಾಗಿ ಒಪ್ಪಿಕೊಳ್ಳ ಲ್ಪಟ್ಟಿದೆ. ಈ ಹೇಳಿಕೆಯನ್ನು ಅಲ್ಲಗಳೆಯುವ ಒಂದೇ ಮಾರ್ಗವು ಯೇಸು ಬಂದ ನಂತರ ಈ ಪ್ರವಾದನೆಗಳು ಬರೆಯಲ್ಪಟ್ಟವು ಎಂದು ಒಪ್ಪಿಕೊಳ್ಳುವಂಥದ್ದು. ಹೀಗಿದ್ದರೂ, ಈ ಒಪ್ಪಿಕೊಳ್ಳುವಿಕೆಯು ಧರ್ಮನಿಂದಕರಿಂದಲೂ ತಿರಸ್ಕರಿಸಲ್ಪಟ್ಟಿರುತ್ತದೆ. ಯೆಹೂದಿ ಧರ್ಮನಿಂದಕರಿಂದಲೂ ಸಹ ಹಳೇ ಒಡಂಬಡಿಕೆಯ ಪುಸ್ತಕಗಳ ಪುರಾತತ್ವದ ಬಗೆಗೂ ಪಠ್ಯಗಳ ಸ್ಪಷ್ಟತೆಯ ಬಗೆಗೂ ಬಲವಾಗಿ ಒಪ್ಪಿಗೆ ಕೊಡಲ್ಪಟ್ಟಿದೆ. ಹೀಗೆ ಕ್ರಿಸ್ತನಲ್ಲಿ ಯೆಹೂದಿ ಅವಿಶ್ವಾಸಿಗಳು ಮನಸ್ಸಿಲ್ಲದೇ ಆತನ ಕಾರಣಕ್ಕೆ ಕೊಡುಗೆಯನ್ನಿತ್ತಿದ್ದಾರೆ!

## ಯೇಸುವಿನಿಂದ ಕೊಡಲ್ಪಟ್ಟ ಪ್ರವಾದನೆಗಳು

ಕ್ರಿಸ್ತನ ಬರೋಣದ ಬಗೆಗಿನ 332 ಪ್ರವಾದನೆಗಳಲ್ಲಿ ಒಂದು ಆತನು ತಾನೇ ಒಬ್ಬ ಪ್ರವಾದಿಯಾಗಿರುವಂಥದ್ದು. ತನ್ನ ಸ್ವಂತ ಶಕ್ತಿಯ ಮೇಲೆಯೇ ಪ್ರವಾದಿಸುವಂಥ ದೈವಿಕ ಬಲವನ್ನು ಪ್ರದರ್ಶಿಸಿದನು. ಈ ಬಡಿಗನು/ಪ್ರಸಂಗಿಯು ಸಣ್ಣ ಗುಂಪಿನ ಹಿಂಬಾಲಕರೊಂದಿಗೆ ತನ್ನ ಸ್ವಂತ ಮರಣವನ್ನು ಮುಂತಿಳಿಸಿದನು (ಮತ್ತಾಯ 16:21; ಮಾರ್ಕ 9:31; ಲೂಕ 9:22). ಆದಾಗ್ಯೂ ತನ್ನ ಚಳವಳದ ಭವಿಷ್ಯದಲ್ಲಿಯ ವಿಸ್ತರಣೆಯನ್ನು ಮುಂತಿಳಿಸಿದನು. ಆತನು ಮಹತ್ವವಿಲ್ಲದ ಪ್ರವಾದಿಯಾಗಿರಲಿಲ್ಲ. ಆತನ ಮರಣದ ನಂತರ ಆತನ ಹಿಂಬಾಲಕರು ಹೇಗೆ ಸಂಖ್ಯೆಯಲ್ಲಿ ಬೆಳೆಯುತ್ತಾ ಹೋದರು ಎಂಬುದನು ಚರಿತ್ರೆಯ ಆಶ್ಚರ್ಯಗಳಲ್ಲಿ ಒಂದಾಗಿರುತ್ತದೆ.

ಯೇಸುವಿನ ಅನೇಕ ಮುಂತಿಳಿಸುವಿಕೆಗಳಲ್ಲಿ ಇಪ್ಪತ್ತೈದು ಹೇಳಿಕೆಗಳು ಯೆರೂಸಲೇಮ ಪಟ್ಟಣವನ್ನು ಕುರಿತಾಗಿರುತ್ತವೆ. ಸಮಾಧಾನದ ಸಮಯದಲ್ಲಿ, ಅದರ

ಸಂಪೂರ್ಣ ನಾಶನದ ಬಗ್ಗೆ ಧೈರ್ಯದಿಂದ ಮುಂತಿಳಿಸಿದನು (ಮತ್ತಾಯ 16:21; ಮಾರ್ಕ 9:31; ಲೂಕ 9:22). ಬಹು ದೊಡ್ಡ, ಬಿಳೀ ಮಾರ್ಬಲ್ ಕಲ್ಲುಗಳು, 50 x 24 x 16 ಅಡಿ ಅಳತೆಯವುಗಳು - ದೇವಾಲಯದ ಮಹಿಮೆಯಾಗಿದ್ದವುಗಳು - ಒಂದರ ಮೇಲೆ ಒಂದು ಇರುವಂತೆ ಬಿಡಲ್ಪಡುವುದಿಲ್ಲ (ಮತ್ತಾಯ 24:2; ಮಾರ್ಕ 13:2; ಲೂಕ 21:6). ಇದು ನಲ್ವತ್ತು ವರ್ಷಗಳ ನಂತರ ಟೈಟಸನು ಪಟ್ಟಣವನ್ನು ವಶಪಡಿಸಿಕೊಂಡಾಗ ನೆರವೇರಿತು. ದೇವಾಲಯದ ಬಂಗಾರವನ್ನು ಬೆಂಕಿಯು ಕರಗಿಸಿತು, ಹಾಗೂ "ಕರಿಗಿಸಲ್ಪಟ್ಟ ನಿಧಿಯನ್ನು ಹುಡುಕಿ ತೆಗೆದು ಕೊಳ್ಳುವದಕ್ಕಾಗಿ ತಳದ ವರೆಗೆ" ಸೂರೆ ಮಾಡುವದರಿಂದ ಕಲ್ಲುಗಳು ಕಿತ್ತು ಹಾಕಲ್ಪಟ್ಟವು. ಸೇನಾಪತಿ ಟೈಟಸ್‌ನು ಅಲಂಕೃತ ಕಟ್ಟಡವನ್ನು ರಕ್ಷಿಸಲು ಪ್ರಯತ್ನಿಸಿದನು. ಆದರೆ ಅವನು ತನ್ನ ಸೈನಿಕರ ಕೋಪವನ್ನು ನಿಯಂತ್ರಿಸಲು ಶಕ್ತನಾಗಲಿಲ್ಲ. ಸುಂದರವಾದ ಹಾಗೂ ಬೆಲೆಯುಳ್ಳ ದೇವಾಲಯದ ಕಟ್ಟಡವನ್ನು ಉಳಿಸುವ ಪ್ರಯತ್ನದಲ್ಲಿ ಟೈಟಸ್‌ನು ತಿಳಿಯದೇ ಯೇಸುವಿನ ಮಾತಿಗೆ ವಿರುದ್ಧವಾಗಿ ಕೆಲಸ ಮಾಡುವ ಕಾರ್ಯಭಾರಿಯಾಗಿ ಕಂಡುಬಂದನು. ಏನಾಗುವುದೋ ಎಂಬುದನ್ನು ಯೇಸುವು ಬಲ್ಲವನಾಗಿದ್ದನು, "ನಾನು ಮುಂಚಿತವಾಗಿಯೇ ಹೇಳಿ ದ್ದೇನೆ, ನೋಡಿರಿ" ಎಂದು ಮತ್ತಾಯ 24:25ರಲ್ಲಿ ಆತನು ಹೇಳಿದ್ದಾನೆ. ರೋಮನ್ ಕಾರ್ಯಚರಣೆಯ ಯಶಸ್ಸು ಯುದ್ಧಾಸ್ತ್ರಗಳಿಂದ ಅಲ್ಲ ಆದರೆ ದೇವರ ಚಿತ್ತಕ್ಕನುಗುಣವಾಗಿತ್ತು ಎಂದು ಟೈಟಸ್ ಅನಂತರದಲ್ಲಿ ಗುರುತಿಸಿ ಕೊಂಡನು.

ಸುಳ್ಳು ಕ್ರಿಸ್ತರು ಎದ್ದು ಬರುವರು ಎಂದು ಯೇಸು ಹೇಳಿದನು. ಪ್ರೇರೇಪಿತ ಪ್ರವಾದಿ ಗಳೆಂದು ದೊಡ್ಡದಾಗಿ ಹೇಳಿಕೊಳ್ಳುತ್ತಿದ್ದ ಜನರ ಹೆಸರುಗಳನ್ನು ಇತಿಹಾಸವು ದಾಖಲೆ ಮಾಡುತ್ತದೆ. ಯೇಸುಕ್ರಿಸ್ತನ ವಾಕ್ಯಗಳಿಗನುಸಾರವಾಗಿ ಯುದ್ಧಗಳೂ, ಯುದ್ಧಗಳಾಗುವ ವದಂತಿಗಳೂ, ಬರಗಾಲಗಳೂ ಭೂಕಂಪಗಳೂ ಆಗುವವು (ಮತ್ತಾಯ 24:6, 7; ಮಾರ್ಕ 13:7, 8). ಯುದ್ಧಗಳ ಬಗ್ಗೆ ಮತ್ತು ಯುದ್ಧಗಳಾಗುವ ವದಂತಿಗಳ ಬಗ್ಗೆ ಚರಿತ್ರೆಯು ದಾಖಲೆ ಮಾಡುತ್ತದಷ್ಟೇ ಅಲ್ಲ - ಕ್ಲಾಡಿಯಸ್ ಸೀಜರನ ಆಳಿಕೆಯ ಸಮಯದಲ್ಲಿ - ಬರಗಾಲಗಳ, ವ್ಯಾಧಿಗಳ ಮತ್ತು ಭೂಕಂಪಗಳ ಬಗೆಗೂ ದಾಖಲೆ ಮಾಡಿತು. ಆಕಾಶದಿಂದ ಮಹಾ ಸೂಚನೆಗಳು ಕಂಡುಬರುವವು ಎಂದು ಯೇಸು ಹೇಳಿದನು (ಲೂಕ 21:11). ಗೌರವಾನ್ವಿತ ಚರಿತ್ರೆಗಾರರು, ಅವರು ಅವಿಶ್ವಾಸಿಗಳಾಗಿದ್ದರೂ, ಮನುಷ್ಯನ ಮೇಲೆ ಆಳವಾಗಿ ಪ್ರಭಾವ ಬೀರಿದ ಅಸಾಮಾನ್ಯವಾದ ದುಷ್ಕೃತ್ಯಗಳನ್ನು ದಾಖಲೆ ಮಾಡಿದ್ದಾರೆ. ಯೇಸುವಿನ ಶಿಷ್ಯರು ಯೆರೂಸಲೇಮ ಬಿದ್ದು ಹೋಗುವ ಮೊದಲು ಕಠಿಣವಾದ ಹಿಂಸೆಯನ್ನು ಅನುಭವಿಸುವರೆಂದು ಯೇಸು ಮುನ್ನೆಚ್ಚರಿಕೆ ನೀಡಿದನು (ಮತ್ತಾಯ 24:9). ಹೀಗೆ ನೀರೋ ಮತ್ತು ಇತರ ಚಕ್ರವರ್ತಿಗಳು ಕ್ರೈಸ್ತರಿಗೆ ಏನು ಮಾಡುವರು ಎಂಬುದನ್ನು ಯೇಸು ಮುಂಚಿತವಾಗಿಯೇ ತಿಳಿದಿದ್ದನು. ಹಿಂಸೆಯ ನಿಮಿತ್ತವಾಗಿ ಅನೇಕ ಕ್ರೈಸ್ತರು ವಿಶ್ವಾಸದಿಂದ ಬಿದ್ದುಹೋಗುವರು ಎಂದು ಯೇಸು ಪ್ರವಾದನೆ ಹೇಳಿದನು (ಮತ್ತಾಯ 24:10). ಅಂಥ ಧರ್ಮದ್ರೋಹಿಗಳ ಬಗ್ಗೆ ಚರಿತ್ರೆಯು ಹೇಳುತ್ತದೆ. ಯೆರೂಸಲೇಮಿನ ಪತನದ ಮೊದಲು ಇಡೀ ಲೋಕವು ಸುವಾರ್ತೆಯನ್ನು ಕೇಳಬೇಕಾಗಿತ್ತು. ಕ್ರಿ.ಶ. 30ರಿಂದ 70ರ ವರೆಗಿನ ಕ್ರೈಸ್ತತ್ವದ ವಿಸ್ತರಣೆಯ ದಾಖಲೆಯು ಚರಿತ್ರೆಯ ಅತ್ಯಾಶ್ಚರ್ಯಕರವಾದ ಅಧ್ಯಾಯ ವಾಗಿದೆ. ಯೆರೂಸಲೇಮನ್ನು ಸೈನ್ಯಗಳು ಸುತ್ತುವರಿಯುವದಕ್ಕಿಂತ ನಲ್ವತ್ತು ವರ್ಷಗಳ ಮೊದಲು ತನ್ನ ಶಿಷ್ಯರಿಗೆ ತಪ್ಪಿಸಿಕೊಳ್ಳುವ ಅವಕಾಶವು ಇತ್ತೆಂದು ಯೇಸು ತಿಳಿದಿದ್ದನು. ಇನ್ನೊಂದೆಡೆಯಲ್ಲಿ ರೋಮನ್ ಸೇನಾಪತಿ ಸೆಸ್ಟಿಯನ್ ಗಲ್ಲಸ್‌ನು ದಾಳಿಯನ್ನು ಪ್ರಾರಂಭಿಸಿದ ನಂತರ ಫಕ್ಕನೇ ಯಾಕೆ ಹಿಂದೆಗೆದು ಕೊಂಡನು ಎಂಬುದಕ್ಕೆ ಕಾರಣವನ್ನು ಇತಿಹಾಸಕಾರರು ಇನ್ನೂ ತಿಳಿದಿರುವದಿಲ್ಲ, ... ದಾಳಿಯು ಪುನಃ ಪ್ರಾರಂಭವಾಗುವದಕ್ಕಿಂತ

ಮೊದಲು ಸಾವಿರಾರು ಕ್ರೈಸ್ತರು ಓಡಿ ಹೋಗಬೇಕೆಂಬ ಯೇಸುವಿನ ಉಪದೇಶವನ್ನು ತಿಳಿದುಕೊಂಡು ಯೆರೂಸಲೇಮನ್ನು ಬಿಟ್ಟು ಓಡಿಹೋದರು ಮತ್ತು ತಮ್ಮ ಪ್ರಾಣಗಳನ್ನು ಉಳಿಸಿಕೊಂಡರು. ನಂಬದೇ ಇದ್ದ ಯೆಹೂದ್ಯರು ಅಲ್ಲಿ ಉಳಿದು ಕೊಂಡರು ಹಾಗೂ ನಾಶಮಾಡಲ್ಪಟ್ಟರು ಇಲ್ಲವೇ ಗುಲಾಮರಾಗಿ ಮಾರಲ್ಪಟ್ಟರು.

ಯೇಸು, ತಾನು ಬಹಳವಾಗಿ ಪ್ರೀತಿಸಿದ ಹಾಗೂ ಅದರ ಮೇಲೆ ಕಣ್ಣೀರು ಸುರಿಸಿದ, ಯೆರೂಸಲೇಮ ಪಟ್ಟಣವು ಜಗತ್ತಿನ ಅತೀ ಕಠಿಣವಾದ ಸಂಕಷ್ಟವನ್ನು ಸಹಿಸುವದೆಂದು ಮುಂತಿಳಿಸಿದನು. ಇದು ಹೇಗೆ ಆಯಿತು ಎಂಬುದನ್ನು ಅನಂತರದಲ್ಲಿ ಅಪನಂಬಿಗಸ್ತ ಚರಿತ್ರೆಕಾರನಾದ ಫ್ಲೇವಿಯಸ್ ಜೋಸಿಫಸ್ ಎಂಬವನು ವಿವರಿಸಿದ್ದಾನೆ. ತೀವ್ರ ಆಹಾರ ಕೊರತೆಯು ನರಭಕ್ಷತೆಗೆ ನಡಿಸಿದ್ದಲ್ಲದೇ, ಈ ಭೀಕರದಾಳಿಯ ಪರಿಣಾಮವಾಗಿ 1,100,000 ನಿವಾಸಿಗಳು ಕೊಲ್ಲಲ್ಪಟ್ಟರು ಹಾಗೂ 97,000 ಜನರು ಸೆರೆಯಾಗಿ ಒಯ್ಯಲ್ಪಟ್ಟರು. ಅನೇಕ ವರ್ಷಗಳ ನಂತರ ಕಟ್ಟಡಗಳ ಅಸ್ತಿವಾರಗಳು ಅಗಿದು ತೆಗೆಯಲ್ಪಟ್ಟಾಗ, ಆ ಸ್ಥಳದಲ್ಲಿ ಜನರು ವಾಸವಾಗಿದ್ದರು ಎಂದು ಹೇಳಲಾರದಂತಿತ್ತೆಂದು ಪ್ರತ್ಯಕ್ಷ ದರ್ಶಿಯು ವರದಿ ಮಾಡಿದ್ದಾನೆ. ದೇವಾಲಯದಲ್ಲಿ ಕೊನೆಯ ಯಜ್ಞವು ಜುಲೈ 16ರಂದು ಅರ್ಪಿಸಲ್ಪಟ್ಟಿತು ಹಾಗೂ ಕ್ರಿ.ಶ. 70 ಆಗಷ್ಟ 9ರಂದು ಪಟ್ಟಣವು ಬೆಂಕಿಯಿಂದ ಸುಡಲ್ಪಟ್ಟಿತು.

ಬರಲಿಕ್ಕಿದ್ದ ಯೆರೂಸಲೇಮಿನ ಅಂತ್ಯದ ಆಶ್ಚರ್ಯಕರವಾದ ಸಂಗತಿಯನ್ನು ಯೇಸು ಮುಂತಿಳಿಸಿದ್ದನು. ಆತನು ಆಗ ಜೀವಿಸುತ್ತಿದ್ದವರ ಕಾಲಾವಧಿಯಲ್ಲಿಯೇ ಬರುವದೆಂದು ಸ್ಪಷ್ಟಪಡಿಸಿದ್ದನು. ಸಮಯಕ್ಕೆ ತಕ್ಕಂತೆ ನಲ್ವತ್ತು ವರ್ಷಗಳ ನಂತರ ಅನ್ಯ ಸೇನೆಯು ಆತನ ವಾಕ್ಯವನ್ನು ನೆರವೇರಿಸಿತು.

ಯೇಸುವಿನ ಪೂರ್ವ ಜ್ಞಾನದ ಮೌಲ್ಯವನ್ನು ಕಡಿಮೆ ಮಾಡಲು, ಅಲ್ಪವಾದ ವಿವರಣೆಗಳೂ ಸಹ, ಮುಂತಿಳಿಸುವಿಕೆಯು ಆತನ ಶಿಷ್ಯರಿಂದ ಯೆರೂಸಲೇಮ ಪತನದ ನಂತರ ಬರೆಯಲ್ಪಟ್ಟಿತೆಂದು ಹೇಳುವುದು ಒಂದೇ ಮಾರ್ಗವಾಗಿದೆ. ಹೀಗಿರುವಲ್ಲಿ, ಯೇಸುವಿನ ಮುಂತಿಳಿಸುವಿಕೆಗಳನ್ನು ಕೊಡುವ ಮೂರು ಸುವಾರ್ತಾ ವಿವರಣೆಗಳು ಯೆರೂಸಲೇ ಮಿನ ಪತನಕ್ಕಿಂತ ಮೊದಲು ಪ್ರಕಟಿಸಲ್ಪಟ್ಟಿತೆಂದು ಪುರಾವೆಯು ಸೂಚಿಸುತ್ತದೆ. ಅವು ಚಲಾವಣೆಯಲ್ಲಿ ಇದ್ದದ್ದು ಅಷ್ಟೇ ಅಲ್ಲ, ಕ್ರೈಸ್ತರು ಸುವಾರ್ತೆಗಳಲ್ಲಿ ಕಂಡು ಬಂದ ಉಪದೇಶದ ಪ್ರಕಾರ ಪಟ್ಟಣದಿಂದ ಓಡಿಹೋಗುವ ಕಾರ್ಯ ಮಾಡಿದರೆಂದು ಸ್ಪಷ್ಟವಾಗಿದೆ. ಪಟ್ಟಣದ ನಾಶನದ ಬಗ್ಗೆ ಮುಂತಿಳಿಸುವಿಕೆಗಳನ್ನು ಕೊಡುವಲ್ಲಿ ತಪ್ಪಿಹೋದ ಒಂದೇ ಸುವಾರ್ತೆಯು ಯೋಹಾನನಿಂದ ಬರೆಯಲ್ಪಟ್ಟದ್ದು. ಕ್ರಿ.ಶ. 70ರ ನಂತರ ಪ್ರಕಟಿಸಲ್ಪಟ್ಟ ಸುವಾರ್ತೆ ಅದೊಂದೇ ಆಗಿದೆ.

ಯೇಸುವಿನ ಮುಂತಿಳಿಸುವಿಕೆಗಳು ಅಷ್ಟು ಮಹತ್ವದವುಗಳಾಗಿದ್ದವು ಹಾಗೂ ನೆರವೇರುವಿಕೆಗಳು ಸ್ಪಷ್ಟವಾದವುಗಳಾಗಿದ್ದವು. ಯೇಸುವಿನ ಮುಂತಿಳಿಸುವಿಕೆಯಲ್ಲಿ ಒಂದನ್ನು ಉದ್ದೇಶಪೂರ್ವಕವಾಗಿ ಇಲ್ಲವಾಗಿ ಮಾಡಲು ಆಶ್ಚರ್ಯಕರವಾದ ಪ್ರಯತ್ನ ಮಾಡಲ್ಪಟ್ಟಿತೆಂದು ಚರಿತ್ರೆಯು ಹೇಳುತ್ತದೆ. ಯೆರೂಸಲೇಮಿನ ಪತನದ ನಂತರ ಅದು ಅನ್ಯರಿಂದ ತುಳಿಯಲ್ಪಡುವುದು ಎಂದು ಯೇಸು ಹೇಳಿದನು. ಧರ್ಮದ್ರೋಹಿ ಚಕ್ರವರ್ತಿ ಜುಲಿಯಸ್‌ನು (ಕ್ರಿ. ಶ. 331-62). ಕ್ರೈಸ್ತತ್ವಕ್ಕಾಗಿರುವ ತನ್ನ ದ್ವೇಷದಲ್ಲಿ, ಅನ್ಯರನ್ನು ಹೊರಗೆ ಹಾಗಿ, ಯೆರೂಸಲೇಮಿನಲ್ಲಿ ಯೆಹೂದ್ಯರನ್ನು ಪುನಸ್ಥಾಪಿಸಲು ತೀರ್ಮಾನಿಸಿಕೊಂಡನು. ದೇವಾಲಯವನ್ನು ಪುನಃ ಕಟ್ಟುವ ಅವನ ಪ್ರಯತನ್ನವು ಕೆಲವು ನೈಸರ್ಗಿಕ ಹಾಗೂ ಕೆಲವು ಅಲೌಕಿಕ ಆತಂಕಗಳನ್ನು ಎದುರಿಸಿತು. ಅಂತಿಮವಾಗಿ, ಅಪಾರವಾದ ಹಣವನ್ನು ವ್ಯಯಿಸಿದ ನಂತರ, ಜೂಲಿಯಸ್ ತನ್ನ ಯೋಜನೆಯನ್ನು ತಳ್ಳಿಬಿಟ್ಟನು. ತನ್ನ ಮರಣದ

ಸಮಯದಲ್ಲಿ, "ಗಲಿಲಾಯದವನೇ, ನೀನು ಜಯಶಾಲಿಯಾದಿ" ಎಂದು ಹೇಳಿದನೆಂದು ವರದಿ ಮಾಡಲಾಗಿದೆ.

## ಮುಕ್ತಾಯ

ಹಳೇ ಮತ್ತು ಹೊಸ ಒಡಂಬಡಿಕೆಯ ಈ ಪ್ರವಾದನೆಗಳ ನೆರವೇರಿಕೆಯ ಈ ಕುತೂಹಲಭರಿತ ಅಧ್ಯಯನವು ದೈವಿಕ ಕರ್ತೃವಿನ ಕಡೆಗೆ ತೋರಿಸುತ್ತದೆ. ಒಂದೇ ಕಾಲಕ್ಕೆ ಸಂಭವಿಸಲಾಗದಂತೆ (coincidental) ಈ ಪ್ರವಾದನೆಗಳು ಬಹಳ ಸ್ಪಷ್ಟವಾಗಿವೆ: ಅವು ಊಹಾಪೋಹಗಳಾಗದಂತೆ ಸ್ಪಷ್ಟವಾಗಿ ನೆರವೇರಿಸಲ್ಪಟ್ಟಿವೆ. ದೇವರ ವಾಕ್ಯದ ದೈವ ಪ್ರೇರಣೆಯ ಬಗ್ಗೆ ಅವು ನಮ್ಮನ್ನು ದೃಢಪಡಿಸಲಿ.

---

ಟಿಪ್ಪಣಿಗಳು

[1]ಕಲ್ದೀಯವು ಯೋಗ್ಯವಾದ ಬಬಿಲೋನಿನ ದಕ್ಷಿಣ ಭಾಗಾವಾಗಿದೆ. ಕಲ್ದೀಯರು ಈ ಭಾಗದಲ್ಲಿ ಪ್ರಭಾವಶಾಲಿಗಳಾದಾಗ ಅವರು ನಿಯೊ-ಬಬಿಲೋನ ಸಾಮ್ರಾಜ್ಯವನ್ನು ಸ್ಥಾಪಿಸಿದರು. ಇಬ್ರೀಯ ಪ್ರವಾದಿಗಳು "ಕಲ್ದೀಯರ ನಾಡು" ಎಂಬುದನ್ನು ಇಡೀ ಬಬಿಲೋನಿಗೆ ಹಾಗೂ "ಕಲ್ದೀಯರು" ಎಂಬುದನ್ನು ಬಬಿಲೋನ್ ಸಾಮ್ರಾಜ್ಯದ ಎಲ್ಲಾ ಪ್ರಜೆಗಳಿಗೆ ಅನ್ವಯಿಸಿದರು. [2]ಅಂತಿಯೋಕಸ್ (ಎಪಿಫನೆಸ)ನು ಸಿರಿಯದ ಸೆಲ್ಯುಸಿದ ಅರಸನಾದನು. ಹಳೆ ಮತ್ತು ಹೊಸ ಒಡಂಬಡಿಕೆಯ ಮಧ್ಯದ ಅವಧಿಯಲ್ಲಿ ಕ್ರಿ.ಪೂ. 175ರಿಂದ 164ವರೆಗೆ ಆಳಿಕೆ ಮಾಡಿದನು. ಹೆಲ್ಲೆನಿಕ್ ಸಂಸ್ಕೃತಿಯನ್ನು ಯೂದಾಯವನ್ನು ಒಳಗೊಂಡು ತನ್ನ ಪ್ರಜೆಗಳ ಮೇಲೆ ಒತ್ತಾಯಪೂರ್ವಕವಾಗಿ ಹೇರಿದನು. ಯೂದಾಯವನ್ನು ನಾಶಪಡಿಸುವ ಅವನ ಪ್ರಯತ್ನವು ಸುನ್ನತಿಯನ್ನು, ಸಬ್ಬತ್ ಆಚರಣೆಯನ್ನು ಮತ್ತು ಧರ್ಮಶಾಸ್ತ್ರವನ್ನು ಓದುವದನ್ನು ಪ್ರತಿಬಂಧಿಸಲು ನಡಿಸಿತು. ದೇವಾಲಯವು ಹೊಲೆಮಾಡಲ್ಪಟ್ಟಿತು. ಯೆಹೂದ್ಯರು ಅನ್ಯ ವಿಗ್ರಹಾರಧನೆಯಲ್ಲಿ ಹಾಗೂ ಅಶುದ್ಧ ಆಹಾರ ತಿನ್ನುವದರಲ್ಲಿ ಭಾಗವಹಿಸಬೇಕಾಗಿತ್ತು. ಯೂದ ಮಕ್ಕಬ್ಬಿಯನು ದಂಗೆಯನ್ನು ನಡಿಸಿದನು. ಅದು ಯೆಹೂದಿ ಸ್ವಾತಂತ್ರ್ಯವನ್ನು ಪುನಃ ಸ್ಥಾಪಿಸುವದರಲ್ಲಿ ಕ್ರಮೇಣವಾಗಿ ಪೂರ್ತಿಗೊಂಡಿತ್ತು. ಕ್ರಿ.ಪೂ. 141ರಲ್ಲಿ ದೇಶವು ಸಿರಿಯದ ನಿಯಂತ್ರಣದಿಂದ ಸ್ವತಂತ್ರವಾಯಿತು. ಮಕ್ಕಬ್ಬಿಯರ ದಂಗೆಯು ಹಾಗೂ ಅದಕ್ಕೆ ನಡಿಸಿದ ಘಟನೆಗಳು ಪ್ರೇರೇಪಿಸಲ್ಪಡದ ಗ್ರಂಥಗಳಲ್ಲಿ ಅಂದರೆ 1 ಮತ್ತು 2 ಮಕ್ಕಬ್ಬಿಯರ ಗ್ರಂಥಗಳಲ್ಲಿ ದಾಖಲಿಸಲ್ಪಟ್ಟಿವೆ. [3]Alexander Campbell, *The Evidences of Christianity: A Debate* (Cincinnati: Chase and Hall, 1878), 334-35. [4]Ibid. [5]Alexander Keith, *Evidence of Truth of the Christian Religion Derived from the Literal Fulfilment of Prophecy* (Philadelphia: Presbyterian Board of Publication, n.d.), 368-69.

© 2009 Truth for Today